# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಮಾರ್ಚ್ 13, 2022

ಸಂಪುಟ : 48 ಸಂಚಿಕೆ : 302 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com




# ಕಚೇರಿಗಳಿಗೆ ರೈತರ ಅಲೆದಾಟ ತಪ್ಪಲಿದೆ

## ಕಂದಾಯ ದಾಖಲೆ ರೈತರ ಮನೆ ಬಾಗಿಲಿಗೆ ಕಾರ್ಯಕ್ರಮಕ್ಕೆ ಸಂಸದ ಸಿದ್ದೇಶ್ವರ ಚಾಲನೆ

ದಾವಣಗೆರೆ, ಮಾ.12- ರೈತರ ಮನೆ ಬಾಗಿಲಿಗೆ ಕಂದಾಯ ಇಲಾಖೆ ಸೌಲಭ್ಯಗಳನ್ನು ತಲುಪಿಸುವ ಉದ್ದೇಶದಿಂದ ಕಂದಾಯ ದಾಖಲೆ ಮನೆ ಬಾಗಿಲಿಗೆ ಸರ್ಕಾರದ ದಿಟ್ಟ ಹೆಜ್ಜೆ ಎಂಬ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದು ಸಂಸದ ಡಾ. ಜಿ.ಎಂ ಸಿದ್ದೇಶ್ವರ್ ಹೇಳಿದರು.



ಶನಿವಾರ ಹಳೇಬಾತಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಜಿಲ್ಲಾಡಳಿತ ಮತ್ತು ತಾಲ್ಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ 'ಕಂದಾಯ ದಾಖಲೆ ರೈತರ ಮನೆ ಬಾಗಿಲಿಗೆ' ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿ ದರು.

ಗ್ರಾಮೀಣ ಭಾಗದ ರೈತರು ದಿನನಿತ್ಯ ದಾಖಲೆ ಪಡೆಯುವ ಸಲುವಾಗಿ ಕಛೇರಿಗಳಿಗೆ ಅಲೆದಾಡು ವುದು ತುಂಬಾ ಕಷ್ಟವಾಗುತ್ತದೆ. ರೈತರಿಗೆ ಅವಶ್ಯಕವಿರುವ ಕಂದಾಯ ದಾಖಲೆಗಳನ್ನು ಮನೆಬಾಗಿಲಿಗೆ ತಲುಪಿಸುವುದರಿಂದ ಈ ರೀತಿಯ ಅಲೆದಾಟ ತಪ್ಪಿಸಿದಂತಾಗುತ್ತದೆ ಎಂಬ ಆಲೋಚನೆಯಿಂದ ರಾಜ್ಯ ಸರಕಾರ ಈ ವಿನೂತನ ಯೋಜನೆ ರೂಪಿಸಿದೆ ಎಂದರು. ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೆ ಸಕಾಲಕ್ಕೆ ರೈತರು (2ನೇ ಪುಟಕ್ಕೆ)

# ಸಾಹಿತ್ಯ ಕ್ಷೇತ್ರದಲ್ಲಿ ಪಾವಿತ್ರ್ಯತೆ ಕಾಪಾಡಿಕೊಳ್ಳಿ

**ಜಿಲ್ಲಾ ಕಸಾಪ ನೂತನ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭದಲ್ಲಿ ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ**

ದಾವಣಗೆರೆ, ಮಾ.12- ವ್ಯಕ್ತಿಗತ ದೋಷಗಳನ್ನು ಸಂಘ-ಸಂಸ್ಥೆಗಳಲ್ಲಿ ತಂದು ತುರುಕುವುದು ಸರಿಯಲ್ಲ. ರಾಜಕೀಯವನ್ನು ಹೊರಗಿಟ್ಟು ಸಾಹಿತ್ಯ ಕ್ಷೇತ್ರದ ಪಾವಿತ್ರ್ಯತೆ ಕಾಪಾಡಿಕೊಳ್ಳಿ ಎಂದು ಅನುಭವ ಮಂಟಪದ ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ ಸಲಹೆ ನೀಡಿದರು.

ಜಿಲ್ಲಾ ಕನ್ನಡ ಸಾಹಿತ್ ಪರಿಷತ್ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ 2021-26ರ ಅವಧಿಯ ಕಾರ್ಯ ಚಟುವಟಿಕೆಗಳ ಉದ್ಘಾಟನೆ ಹಾಗೂ ನೂತನ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸಾಹಿತ್ಯ ಕ್ಷೇತ್ರಕ್ಕೆ ಬಂದವರು ಚುನಾವಣೆಗಾಗಿ ಹತ್ತರಿಂದ ಹನ್ನೆರಡು ಲಕ್ಷ ರೂಗಳನ್ನು ಖರ್ಚು ಮಾಡುತ್ತಾರೆ ಎಂದರೆ ರಾಜಕೀಯ ಕ್ಷೇತ್ರಕ್ಕೂ ಸಾಹಿತ್ಯ ಕ್ಷೇತ್ರಕ್ಕೂ ಇರುವ ವ್ಯತ್ಯಾಸವಾದರೂ ಏನು? ಅತಿ ಕಡಿಮೆ ಸಂಖ್ಯೆಯ ಈ ಕ್ಷೇತ್ರದಲ್ಲಿ ಇಷ್ಟೊಂದು ರಾದ್ಧಾಂತ ಬೇಕೇ ಎಂಬುದನ್ನು ಚಿಂತಿಸಿ ಅವಿರೋಧ ಆಯ್ಕೆಗೆ ಪ್ರಯತ್ನಿಸಿದ್ದಾಗಿ ಶ್ರೀಗಳು ಹೇಳಿದರು.

ರಾತ್ರಿ ಮನಸ್ಸಿಗೆ ಬಂದ ಆಲೋಚನೆಯಂತೆ ಸ್ಪರ್ಧೆಗೆ ಬಯಸಿದ್ದವರಿಗೆ ಕರೆ ಮಾಡಿದ್ದೆ. ಚುನಾವಣೆ ಬೇಕೇ? ಬೇಡವೇ? ಎಂದು ನಿರ್ಧರಿಸಲು ನೀವು ಸ್ವತಂತ್ರರು ಎಂದೂ ಹೇಳಿದ್ದೆ. ಆಗ ಹಲವರು ನಾಮಪತ್ರ ಹಿಂಪಡೆದರು. ಆದಾಗ್ಯೂ ಚುನಾವಣೆ ನಡೆಯಿತು. ಪ್ರಜಾಪ್ರಭುತ್ವದಲ್ಲಿ ಯಾರು ಯಾರಿಗೆ ಬೇಕಾದರೂ ಮತ ನೀಡಬಹುದು. ಚುನಾವಣೆ ನಡೆದು ಆಯ್ಕೆಯಾದ ನಂತರವೂ ಆರೋಪ-ಪ್ರತ್ಯಾರೋಪಗಳನ್ನು ಬೆಳೆಸಬಾರದು ಎಂದು ಕಿವಿ ಮಾತು ಹೇಳಿದರು.

ಪ್ರಜಾಪ್ರಭುತ್ವದಲ್ಲಿ ಟೀಕೆ, ಟಿಪ್ಪಣಿಗಳು ಸಹಜ. ಆದರೆ ವೈಯಕ್ತಿಕವಾಗಿ, ವ್ಯಕ್ತಿಗತವಾಗಿ ಮಾತನಾಡುವುದು ಸರಿಯಲ್ಲ. ಅದು ಸಣ್ಣ ಮನಸ್ಥಿತಿಯನ್ನು ಬಿಂಬಿಸುತ್ತದೆ. ನಾನೇ ಗೆಲ್ಲಬೇಕು. ನನ್ನಿಂದಲೇ ಆಗಬೇಕೆಂಬ ಸಣ್ಣ ಮನಸ್ಥಿತಿ ಇಷ್ಟು ವರ್ಷಗಳ ಕಾಲವೂ ಮುಂದುವರೆದಿದೆ ಎಂದರು.

ಅತಿ ಕಡಿಮೆ ಸಂಖ್ಯೆಯ ಈ ಕ್ಷೇತ್ರದಲ್ಲಿ ಇಂದು ವೇದಿಕೆ ಮೇಲೆ ನಿಂತು ಕವನ ಓದಿದವರು ಮುಂದಿನ ದಿನಗಳಲ್ಲಿ ಕೆಳಗೆ ಕುಳಿತು ಕವನ ಕೇಳಬೇಕಾಗುತ್ತದೆ. ಇಂದು ಕೆಳಗಡೆ ಕುಳಿತವರು ನಾಳೆ ವೇದಿಕೆ ಮೇಲೆ ಕವನ (2ನೇ ಪುಟಕ್ಕೆ)

## ಅಧ್ಯಕ್ಷರು ತಮ್ಮ ಧೋರಣೆ ಬದಲಿಸಿಕೊಳ್ಳಲಿ: ಕುರ್ಕಿ

ನನ್ನನ್ನು ಹೊರಗಿಟ್ಟು ಕಾರ್ಯಕಾರಿ ಸಮಿತಿ ರಚಿಸಲಾಯಿತು. ಸೌಜನ್ಯಕ್ಕಾದರೂ ಇಂತವರನ್ನು ಆಯ್ಕೆ ಮಾಡಲಾಗಿದೆ ಎಂದು ಹೇಳಲಿಲ್ಲ. ನಾನು ಮಾಡಿದ ತಪ್ಪಾದರೂ ಏನು? ಎಂದು ನಿಕಟ ಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ತಮ್ಮ ನೋವು ಹೊರ ಹಾಕಿದರು.

ನಿಕಟಪೂರ್ವ ಅಧ್ಯಕ್ಷರು ಹಾಲಿ ಅಧ್ಯಕ್ಷರ ಕಾರ್ಯಚಟುವಟಿಕೆಗಳ, ಸಾಹಿತ್ಯಿಕ ಆಡಳಿತದ ಭಾಗವಾಗಿ ಕಾರ್ಯ ನಿರ್ವಹಿಸುತ್ತಾನೆ. ಅವನ ಅನುಭವ ಅಲ್ಲಿ (2ನೇ ಪುಟಕ್ಕೆ)

## ಬೈದವರ ಬಂಧುಗಳೆನ್ನುವೆ

**- ಬಿ. ವಾಮದೇವಪ್ಪ**

ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಅವರ ಮಾತುಗಳಿಗೆ ಪ್ರತಿಕ್ರಿಯಿಸಿದ ಅಧ್ಯಕ್ಷ ವಾಮದೇವಪ್ಪ, ಶರಣರ ಆಚಾರ-ವಿಚಾರಗಳಲ್ಲಿ ನಂಬಿಕೆ ಇಟ್ಟಿರುವ ನಾನು, ಬೈದವರನ್ನು ಬಂಧುಗಳೆನ್ನುವೆ. ನಾಲ್ಕು ಗೋಡೆಗಳ ಮಧ್ಯೆ ಚರ್ಚಿಸಬೇಕಾದ ವಿಷಯಗಳನ್ನು ಬಹಿರಂಗವಾಗಿ ಪ್ರಸ್ತಾಪಿಸುವುದು ಸರಿಯಲ್ಲ. ತಮ್ಮ ಮೇಲಿನ ಆರೋಪಗಳಿಗೆ ಕಾರಣಗಳೇನು ಎಂಬುದು ಗೊತ್ತಿರಬೇಕಾದವರಿಗೆ (2ನೇ ಪುಟಕ್ಕೆ)

## ದುಗ್ಗಮ್ಮನ ಜಾತ್ರೆ: ಇಂದಿನಿಂದಲೇ ಧಾರ್ಮಿಕ ಕಾರ್ಯಕ್ರಮಗಳು

ದಾವಣಗೆರೆ, ಮಾ. 12- ನಗರದೇವತೆ ಶ್ರೀ ದುಗ್ಗಮ್ಮ ದೇವಿ ಜಾತ್ರೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಭಾನುವಾರದಿಂದಲೇ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಲಿವೆ ಎಂದು ದೇವಸ್ಥಾನದ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದರು.



ದೇವಸ್ಥಾನದ ಸಭಾಂಗಣದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತ್ರೆ ಹಿನ್ನೆಲೆಯಲ್ಲಿ ಪ್ರಥಮ ದಿನದ ಬೆಳಿಗ್ಗೆ ದೇವಿಗೆ ಪಂಚಾಮೃತ ಅಭಿಷೇಕ, (2ನೇ ಪುಟಕ್ಕೆ)

## ಕಾಂಗ್ರೆಸ್‌ಗೆ ಇಬ್ರಾಹಿಂ 'ಗುಡ್‌ಬೈ'



ಬೆಂಗಳೂರು, ಮಾ. 12- ಕೇಂದ್ರದ ಮಾಜಿ ಸಚಿವ, ವಿಧಾನಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿ ಪ್ರಕಟಿಸಿದ್ದಾರೆ. ಕಾಂಗ್ರೆಸ್ ತೊರೆಯುತ್ತಿರುವ ಇಬ್ರಾಹಿಂ, ಜೆಡಿಎಸ್ ಸೇರುವುದು ಬಹುತೇಕ ಖಚಿತ. ಆ ಪಕ್ಷ ಸೇರಿದರೂ ಅವರಿಗೆ ಯಾವುದೇ ಉನ್ನತ ಹುದ್ದೆಗಳು ಇಲ್ಲ. ರಾಜ್ಯಾಧ್ಯಕ್ಷ ಸೇರಿದಂತೆ ಕೆಲವು ಬೇಡಿಕೆಗಳನ್ನು ಈ ಮೊದಲು ಜೆಡಿಎಸ್ ನಾಯಕರ ಮುಂದೆ (2ನೇ ಪುಟಕ್ಕೆ)


## ಭಾವಪೂರ್ಣ ಶ್ರದ್ಧಾಂಜಲಿ



ಕಮ್ಮವಾರಿ ಸಂಘದ ಕಟ್ಟಡ ಸಮಿತಿ ಮಾಜಿ ಅಧ್ಯಕ್ಷರೂ,
ಕಮ್ಮವಾರಿ ಸಂಘದ ಮಾಜಿ ಉಪಾಧ್ಯಕ್ಷರೂ,
ಕಮ್ಮವಾರಿ ಸಮಾಜದ ಹಿರಿಯ ಮುಖಂಡರೂ ಆದ

**ಶ್ರೀ ಕೇತಿನೀಡಿ ರಾಮಕೃಷ್ಣ**

ಅವರು ದಿನಾಂಕ : 11.03.2022ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಅಧ್ಯಕ್ಷರು ಮತ್ತು ಪದಾಧಿಕಾರಿಗಳು

**ಕಮ್ಮವಾರಿ ಸಂಘ (ರಿ.), ದಾವಣಗೆರೆ.**






# ಪುಣ್ಯಕೋಟಿ ಮಠದಲ್ಲಿ ವಿನೂತನ ಸದ್ಭಾವನಾ ಹಬ್ಬ

## ಏಪ್ರಿಲ್ 7 ಮತ್ತು 8 ರಂದು 3ನೇ ತುಂಗಾರತಿ ಕಾರ್ಯಕ್ರಮ : ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮೀಜಿ



ಹರಿಹರ, ಮಾ.12- ಪುಣ್ಯಕೋಟಿ ಮಠಕ್ಕೆ ಬರುವ ಯಾವುದೇ ಭಕ್ತರನ್ನೂ ಜಾತಿ, ಮತ, ಪಂಥದ ಭೇದವಿಲ್ಲದೆ, ಎಲ್ಲರೂ ನಮ್ಮವರೇ ಎಂಬ ಭಾವನೆಯಿಂದ ನಾವು ಸ್ವಾಗತಿಸುತ್ತೇವೆ ಎಂದು ಪುಣ್ಯಕೋಟಿ ಮಠದ ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮೀಜಿ ಹೇಳಿದರು.

ನಗರದ ಸಮೀಪದಲ್ಲಿರುವ ಕೋಡಿಯಾಲ ಹೊಸಪೇಟೆ ಗ್ರಾಮದ ತುಂಗಭದ್ರಾ ನದಿ ದಡದಲ್ಲಿರುವ ಪುಣ್ಯಕೋಟಿ ಮಠದಲ್ಲಿ ಆಯೋಜಿಸಿದ್ದ ಸದ್ಭಾವನಾ ಹಬ್ಬ ಎಂಬ ವಿನೂತನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಒಬ್ಬ ವ್ಯಕ್ತಿ ಯಾವುದೇ ಧರ್ಮದಲ್ಲಿ ಹುಟ್ಟಿರಲಿ ಅವನು ಮೊದಲು ಮಾನವನಾಗಬೇಕು ಎಂಬುದನ್ನು ಸಾರುವುದೇ ನಿಜವಾದ ಧರ್ಮ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಪುಣ್ಯಕೋಟಿ ಮಠವು ಎಲ್ಲರನ್ನೂ ಒಟ್ಟಾಗಿ ತೆಗೆದು ಕೊಂಡು ಏಕತೆಗಳ ಮಹತ್ವವನ್ನು ಸಾರುವ ಕಾರ್ಯಕ್ರಮಗಳು ನಡೆಯುತ್ತಿವೆ. ಹಾಗಾಗಿಯೇ ಇಂದು ಮಠದಿಂದ ಸರ್ವಧರ್ಮದವರು ಒಟ್ಟಾಗಿ ಸದ್ಭಾವನಾ ಹಬ್ಬ ಹಮ್ಮಿಕೊಳ್ಳಲಾಗಿದೆ ಎಂದರು.

ಪ್ರತಿವರ್ಷ ಮಠದಿಂದ ತುಂಗಾರತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದ್ದು, ಬರುವ ಏಪ್ರಿಲ್ 7 ಮತ್ತು 8 ರಂದು 3ನೇ ತುಂಗಾರತಿ ಕಾರ್ಯಕ್ರಮವನ್ನು ರಂಭಾಪುರಿ ಶ್ರೀಗಳ ಸಾನ್ನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಈಗಾಗಲೇ ಮಠದ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದ ಜಲ ಸಂಪನ್ಮೂಲ ಇಲಾಖೆಯಿಂದ ಹತ್ತು ಕೋಟಿ ರೂಗಳ ಅನುದಾನ ಬಿಡುಗಡೆಯಾಗಿದ್ದು, ಮೊದಲನೇ ಹಂತದ ಕಾಮಗಾರಿ ಆರಂಭವಾಗಿದೆ. ಇನ್ನುಳಿದ ನದಿಗೆ ತಡೆಗೋಡೆ ಹಾಗೂ ಮಠದ ರಸ್ತೆ, ಸಮುದಾಯ ಭವನ, ದೇವಸ್ಥಾನ ಕಟ್ಟಡಗಳನ್ನು ನಿರ್ಮಿಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಮಹಿಳಾ ಸಂಘ-ಸಂಸ್ಥೆಗಳ ಸದಸ್ಯರಿಂದ ಶ್ರೀಗಳ ನೇತೃತ್ವದಲ್ಲಿ ತುಂಗಭದ್ರಾ ನದಿಗೆ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಲಾಯಿತು.

ಸಮಾರಂಭದಲ್ಲಿ ಗ್ರಾಪಂನ ಚೇತನ್ ಎಂ. ಪೂಜಾರ್, ಜಿಪಂ ಮಾಜಿ ಸದಸ್ಯರಾದ ಮಂಗಳಗೌರಿ ಪೂಜಾರ್, ಶಶಿಕುಮಾರ್ ಮೆಹರ್ವಾಡೆ, ಬಿ.ಟಿ ಸಿದ್ದಪ್ಪ, ನಾಗರಾಜ್ ಹಳ್ಳೆಳ್ಳಪ್ಪರ್, ಸುನಂದ ಜಿ.ಶಿವಣ್ಣ ತಿಳುವಳ್ಳಿ, ಪುಷ್ಪಾ ಬಾದಾಮಿ, ಕೊಂಡಜ್ಜಿ ವೀರೇಶ್, ರುಕ್ಮಿಣಿ ಸಾವುಕಾರ್, ರೂಪಾ ಕಾಟ್ವೆ, ಅಂಬುಜಾಬಾಯಿ ರಾಜೊಳ್ಳಿ, ಗಾಯಿತ್ರಮ್ಮ ಮಾಲಾ ರಮೇಶ್, ಹೆಚ್.ಪಿ.ರುದ್ರಗೌಡ, ಹೆಚ್. ಕೆ. ಕೊಟ್ರಪ್ಪ, ಕರಿಯಪ್ಪ ಮಾಳಗಿ, ಬಿ.ಕೆ ಸ್ವಾಮಿ, ಭಾರತಿ ಜಂಬಗಿ, ಶಾಂತಕುಮಾರಿ, ಡಿ.ವೈ, ಇಂದಿರಾ ಮತ್ತಿತರರು ಉಪಸ್ಥಿತರಿದ್ದರು.

# ಹೊಸ ದಲಿತ ಚಳುವಳಿ ಕಟ್ಟಬೇಕಿದೆ



### ದಲಿತ, ಶೋಷಿತ ಸಮಾಜ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ವೆಂಕಟಗಿರಿಯಯ್ಯ ಆಶಯ

ಹರಿಹರ, ಮಾ.12- ದಲಿತರ ಮೇಲಿನ ದೌರ್ಜನ್ಯಗಳು ಇವತ್ತಿಗೂ ಕೊನೆಯಾಗಿಲ್ಲ. ದಲಿತರು ಚರಿತ್ರೆಯ ಮೂಲಕ ಹೊಸ ದಲಿತ ಚಳುವಳಿಯನ್ನು ಕಟ್ಟುವ ಅಗತ್ಯವಿದೆ ಎಂದು ದಲಿತ, ಶೋಷಿತ ಸಮಾಜ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ವೆಂಕಟಗಿರಿಯಯ್ಯ ಹೇಳಿದರು.

ಹರಿಹರದ ಪ್ರೊ. ಬಿ. ಕೃಷ್ಣಪ್ಪ ಚೈತ್ಯಭೂಮಿಯಲ್ಲಿ ನಡೆದ ಕರ್ನಾಟಕ ದಲಿತ ಸಂಘರ್ಷ ಸಮಿತಿ, ದಲಿತ ಶೋಷಿತ ಸಮಾಜ ಸಂಘರ್ಷ ಸಮಿತಿಯ ಸಮ್ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ನೆಲದಲ್ಲಿ ಪ್ರೊ. ಬಿ. ಕೃಷ್ಣಪ್ಪ ಅವರು ಅಂಬೇಡ್ಕರ್ ವಾದದಿಂದ ದಲಿತ ಸಂಘರ್ಷ ಸಮಿತಿ ಕಟ್ಟಿದ್ದಾರೆ. ಸ್ವಾತಂತ್ರ್ಯ - ಸಮಾನತೆ ಕೃತ್ಯದ ತಳಹದಿಯಲ್ಲಿ ದಲಿತ ಚಳುವಳಿ ರೂಪಗೊಂಡಿದೆ, ದಲಿತರು ಇವತ್ತು ಆರ್ಥಿಕ ಸಮಾನತೆಗಾಗಿ ಹೋರಾಡಬೇಕಾಗಿದೆ ಎಂದು ಅವರು ಹೇಳಿದರು.

ಅಂಬೇಡ್ಕರ್ ಅವರನ್ನು ಸಂವಿಧಾನ ಬರೆಯಲು ವಿರೋಧಿಸಿದ ನಕ್ಸಲರು, ದಲಿತರನ್ನು ನಕ್ಸಲರನ್ನಾಗಿ ಮಾಡಿದರು. ದಲಿತರು ನಕ್ಸಲರಾಗಿ ರಕ್ತಪಾತದ ಮೂಲಕ ಹೋರಾಡಿ ಗುಂಡಿಗೆ ಬಲಿಯಾಗುತ್ತಿದ್ದರು ಎಂದು ವಿಷಾದಿಸಿದರು.

ದಲಿತರು 1974ರಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರನ್ನು ಎತ್ತರಕ್ಕೆ ಕೊಂಡೊಯ್ದದ್ದಕ್ಕೆ ಇವತ್ತು ಮೇಲ್ಜಾತಿಯವರು ಅಂಬೇಡ್ಕರ್ ಅವರು ಒಂದು ಜಾತಿಗೆ ಸೀಮಿತವಾಗಬಾರದು ಎಂದು ಹೇಳುತ್ತಾರೆ ಎಂದ ಅವರು, ಪ್ರಜಾಪ್ರಭುತ್ವ ಮುನ್ನಡೆಗೆ ಬರುವ ಬದಲು ಕೋಮುವಾದ ಮುನ್ನಡೆಗೆ ಬಂದಿದೆ. ಆದ್ದರಿಂದ ಪ್ರಜಾಪ್ರಭುತ್ವದ ಉಳಿವಿಗಾಗಿ ನಮ್ಮ ಸಮ್ಮಿಲನ ನಡೆಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಕದಸಂಸ ರಾಜ್ಯ ಸಂಚಾಲಕ ಎಂ. ಸೋಮಶೇಖರ್ ಅಧ್ಯಕ್ಷತೆ ವಹಿಸಿದ್ದರು, ಅಂದಾನಿ ಸೋಮನಹಳ್ಳಿ, ಎಂ. ದೇವದಾಸ್, ನಾರಾಯಣಸ್ವಾಮಿ, ಹೆಗ್ಗೆರೆ ರಂಗಪ್ಪ, ಅನೀಷ್ ಪಾಷ, ಹೂವಿನಮಡು ಅಂಜಿನಪ್ಪ, ಸಂತೋಷ ನೋಟದವರ, ಎಸ್.ಎಸ್ ಶಾಂತರಾಜ್, ಮಂಜುನಾಥ್ ಎಂ, ನ್ಯಾಮತಿ ಹಾಲೇಶ್, ರಾಜನಹಳ್ಳಿ ಮಂಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ದುಗ್ಗಮ್ಮನ ಜಾತ್ರೆ: ಇಂದಿನಿಂದಲೇ ಧಾರ್ಮಿಕ ಕಾರ್ಯಕ್ರಮಗಳು

(1ನೇ ಪುಟದಿಂದ) ಕಂಕಣಧಾರಣೆ ನಂತರ ರಾತ್ರಿ ಸಾರು ಹಾಕುವ ಕಾರ್ಯಕ್ರಮ ನಡೆಯಲಿದೆ ಎಂದರು.

ಮಾ. 15ರಂದು ಬೆಳಿಗ್ಗೆ ದಾಸೋಹದ ಮಹೋಪಕರಣ ಸಮಾರಂಭೋತ್ಸವ, ರಾತ್ರಿ ಶ್ರೀ ಅಮ್ಮನವರಿಗೆ ಭಕ್ತಿ ಸಮರ್ಪಣೆ, ರಾತ್ರಿ 9ರಿಂದ ಸಾಂಸ್ಕೃತಿಕ ಮೇಳ, ಡೊಳ್ಳು ಕುಣಿತ, ಸಿಡಿಮದ್ದಿನ ಪ್ರದರ್ಶನ ಜತೆಗೆ ಬೆಳ್ಳಿಯ ರಥದಲ್ಲಿ ಅಮ್ಮನವರ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ. ಮಾ. 16 ರಂದು ಶ್ರೀ ದುರ್ಗಾಂಬಿಕಾ ದೇವಿಯ ಮಹಾಪೂಜಾ ಸಮಾರಂಭ ಹಾಗೂ ಬೆಳಿಗ್ಗೆ ಚರಗ ಚೆಲ್ಲುವ ಕಾರ್ಯಕ್ರಮ ನಡೆಯಲಿದೆ ಎಂದರು.


**ಬಯಲು ಜಂಗಿ ಕುಸ್ತಿ :** ಮಾ. 18ರಿಂದ 27ರವರೆಗೆ ದೇವಸ್ಥಾನದ ಮುಂಭಾಗದ ವೇದಿಕೆಯಲ್ಲಿ ರಾತ್ರಿ 8 ಗಂಟೆಯಿಂದ ಪ್ರಸಿದ್ಧ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಮಾ.18ರಿಂದ 20ರವರೆಗೆ ಪ್ರಸಿದ್ಧ ಪೈಲ್ವಾನರಿಂದ ಮಲ್ಲಯುದ್ಧ ಬಯಲು ಜಂಗೀ ಕುಸ್ತಿ ನಗರದ ಬೀರಲಿಂಗೇಶ್ವರ ಕುಸ್ತಿ ಅಖಾಡದಲ್ಲಿ ನಡೆಯಲಿದೆ. ಕುಸ್ತಿ ಕಾಳಗದಲ್ಲಿ ಭಾಗಿಯಾಗುವ ಕುಸ್ತಿಪಟುಗಳಿಗೆ, ನೋಡಲು ಬಂದ ಪರಸ್ಥಳದ ಜನರಿಗೆ ಹಾಗೂ ಉಸ್ತಾದ್‌ಗಳಿಗೆ ಮೂರು ದಿನ ದಾಸೋಹವನ್ನು ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ. ಒಳ್ಳೆಯ ಜೋಡಿ ಕುಸ್ತಿಪಟುಗಳಿಗೆ ಆಕರ್ಷಕ ಬಹುಮಾನ ಮತ್ತು ಹಣ ಕೊಡಲಾಗುತ್ತದೆ. ಕೊನೆಯ ದಿನ ಅಂದಾಜು ಎರಡು ಕೆ.ಜಿ. ತೂಕದ ಬೆಳ್ಳಿ ಗದೆ ಹಾಗೂ 25 ಸಾವಿರ ರೂ. ಹಣ ಕೊಡಲಾಗುವುದು ಎಂದು ತಿಳಿಸಿದರು.

**ಪ್ರಸಾದ ವ್ಯವಸ್ಥೆ:** ಮಾ.18ರಂದು ದಿ. ಶ್ರೀಮತಿ ಶಾಮನೂರು ಪಾರ್ವತಮ್ಮ ಇವರ ಜ್ಞಾಪಕಾರ್ಥವಾಗಿ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳ ವತಿಯಿಂದ ಪ್ರಸಾದ ವ್ಯವಸ್ಥೆ ಇರಲಿದೆ. ಮಾ. 19ರಂದು ದಾವಣಗೆರೆ ಧರ್ಮಪ್ರವರ್ತಕ ರಾಜನಹಳ್ಳಿ ಹನುಮಂತಪ್ಪನವರ ಸವಿನೆನಪಿಗಾಗಿ ಧರ್ಮಪ್ರಕಾಶ ಆರ್. ರಾಮಶೆಟ್ಟರು, ಮೊಮ್ಮಕ್ಕಳು ಮತ್ತು ಆರ್.ಶ್ರೀನಿವಾಸಮೂರ್ತಿ ಅವರ ಮಕ್ಕಳು ಮತ್ತು ಮೊಮ್ಮಕ್ಕಳು ಅವರಿಂದ ಪ್ರಸಾದ ವ್ಯವಸ್ಥೆ ಇದೆ. ಮಾ. 20ರಂದು ಮುದೇಗೌಡ್ರು ದಿ. ಪರಮೇಶ್ವರಪ್ಪ ದಿ. ಶ್ರೀಮತಿ ಲಲಿತಮ್ಮ ಇವರ ಜ್ಞಾಪಕಾರ್ಥವಾಗಿ ಮುದೇಗೌಡ್ರು ಸಿದ್ದರಾಜು, ಮುದೇಗೌಡ್ರು ಮುರುಗೇಶ್, ಮುದೇಗೌಡ್ರು ಗಿರೀಶ್, ಮುದೇಗೌಡ್ರು ಜಗದೀಶ್ ಅವರಿಂದ ಪ್ರಸಾದ ವ್ಯವಸ್ಥೆ ಇದೆ. ಮಾ.18,19,20 ರಂದು ಮೂರು ದಿನ ನಗರದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ ಎಂದರು.

ಜಾತ್ರೆ ಹಿನ್ನೆಲೆಯಲ್ಲಿ ದೇವಸ್ಥಾನ ಸುತ್ತ ಮುತ್ತಲ ಪ್ರದೇಶದಲ್ಲಿ 50 ರಿಂದ 60 ಸ್ಟಾಲ್‌ಗಳಿಗೆ ಅವಕಾಶ ನೀಡಲಾಗಿದೆ. ಅಲ್ಲದೇ, ಜಾತ್ರೆಗೆ ಬರುವ ಭಕ್ತರಿಗೆ ಶೌಚಾಲಯ, ತಾತ್ಕಾಲಿಕ ಆಸ್ಪತ್ರೆ ವ್ಯವಸ್ಥೆ ಮಾಡಲಾಗಿದೆ ಎಂದರು.

**ಕೋಣ ಬಲಿ ಇಲ್ಲ:** ದುರ್ಗಾಂಬಿಕಾ ದೇವಿ ಜಾತ್ರೆಯಲ್ಲಿ ಕೋಣ ಬಲಿ ಕೊಡುವುದಿಲ್ಲ. ಬದಲಾಗಿ ಕೋಣದ ರಕ್ತವನ್ನು ಸಿರಿಂಜ್ ಮೂಲಕ ತೆಗೆದು ಚರಗಕ್ಕೆ ಹಾಕಿ ಚರಗ ಚೆಲ್ಲಲಾಗುವುದು. ಸಾಮಾಜಿಕ ಜಾಲತಾಣಗಳಲ್ಲಿ ಎಲ್ಲಿಯೋ ಕೋಣ ಬಲಿ ಕೊಟ್ಟಿರುವುದನ್ನು ನೋಡಿ ದುರ್ಗಾಂಬಿಕಾ ದೇವಿ ಜಾತ್ರೆಯಲ್ಲಿ ಕೋಣ ಬಲಿ ಕೊಡಲಾಗಿದೆ ಎಂಬ ತಪ್ಪು ಸಂದೇಶ ನೀಡಲಾಗುತ್ತಿದೆ. ಇದಕ್ಕೆ ಯಾರೂ ಆಸ್ಪದ ಕೊಡಬಾರದು ಎಂದು ಧರ್ಮದರ್ಶಿ ಬಿ.ಎಚ್.ವೀರಭದ್ರಪ್ಪ ಮನವಿ ಮಾಡಿದರು. ಧರ್ಮದರ್ಶಿಗಳಾದ ಬಿ.ಎಚ್. ವೀರಭದ್ರಪ್ಪ, ಜೆ.ಕೆ.ಕೊಟ್ರಬಸಪ್ಪ, ತಿಪ್ಪೇಸ್ವಾಮಿ, ಹನುಮಂತರಾವ್ ಸಾಳಂಕಿ ಇನ್ನಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಅಣಬೇರು : ಇಂದಿನಿಂದ ಮಾರಿಕಾಂಬ ಜಾತ್ರೆ



ದಾವಣಗೆರೆ ತಾಲ್ಲೂಕು ಅಣಬೇರು ಗ್ರಾಮದಲ್ಲಿ ಶ್ರೀ ಮಾರಿಕಾಂಬದೇವಿ ಜಾತ್ರೆಯು ಇಂದಿನಿಂದ ಆರಂಭಗೊಳ್ಳಲಿದ್ದು, ಇಂದು ಸಾರು ಹಾಕುವುದು, ದಿನಾಂಕ 15ರ ಮಂಗಳವಾರ ಬೆಳಿಗ್ಗೆ 9 ರಿಂದ ಶ್ರೀ ಮಾರಿಕಾಂಬ ದೇವಿಗೆ ಉಡಿ ತುಂಬುವುದು. ರಾತ್ರಿ 10.30 ರಿಂದ ದೇವಿಯ ಮೆರವಣಿಗೆ ನಡೆಯುವುದು. ದಿನಾಂಕ 16ರ ಬುಧವಾರ ಬೆಳಗಿನ ಜಾವ 4.30 ರಿಂದ ಚರಗ ಹಾಕಲಾಗುವುದು. ಬೆಳಿಗ್ಗೆ 10.30 ರಿಂದ ಭಕ್ತಾದಿಗಳು ದೇವಿಗೆ ಹರಕೆ ಪೂರೈಸುವುದು, ಹೊಳೆ ಪೂಜೆ ಹೋಗಿಬಂದು, ದ್ವಾರ ಬಾಗಿಲ ಮುಳ್ಳು ಗದ್ದುಗೆ ತುಳಿಯುವುದು. ರಾತ್ರಿ 10.30ರ ನಂತರ ಶ್ರೀ ದೇವಿಯನ್ನು ಗುಡಿ ತುಂಬಿಸುವುದು.

# ಎಕ್ಕೆಗೊಂದಿಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಸಂಸದ, ಶಾಸಕರ ಚಾಲನೆ



ಮಲೇಬೆನ್ನೂರು, ಮಾ.12- ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಎಕ್ಕೆಗೊಂದಿಯಿಂದ ಭಾನುವಳ್ಳಿ ಮಾರ್ಗವಾಗಿ ನಂದಿಗುಡಿ ರಸ್ತೆ ಅಭಿವೃದ್ಧಿಗೆ 13.40 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಶನಿವಾರ ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕ ಎಸ್.ರಾಮಪ್ಪ ಅವರು ಗುದ್ದಲಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು. ಹೊಳೆಸಿರಿಗೆರೆ ಸರ್ಕಲ್‌ನಲ್ಲಿ ವೈ.ಎನ್. ರಸ್ತೆಯಿಂದ ಹೊಳೆಸಿರಿಗೆರೆ ಮಾರ್ಗವಾಗಿ ಧೂಳೆಹೊಳೆ ಸೇರುವ ರಸ್ತೆ ಕಾಮಗಾರಿಯನ್ನೂ 1 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಬೆಳ್ಳೂಡಿ ಬಳಿ ಎಸ್.ಹೆಚ್.ರಸ್ತೆ ಅಭಿವೃದ್ಧಿ ಕಾಮಗಾರಿಗೆ (2 ಕೋಟಿ ರೂ. ವೆಚ್ಚದಲ್ಲಿ) ಮತ್ತು ಬನ್ನಿಕೋಡು ಗ್ರಾಮದ ಸರ್ಕಾರಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೂ (2 ಕೋಟಿ ರೂ. ವೆಚ್ಚದಲ್ಲಿ) ಸಂಸದರು, ಶಾಸಕರು ಚಾಲನೆ ನೀಡಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ಭಾನುವಳ್ಳಿ ಗ್ರಾ.ಪಂ. ಅಧ್ಯಕ್ಷ ನೇತ್ರಾವತಿ ಕೊಟ್ರೇಶ್, ತಾ.ಪಂ. ಮಾಜಿ ಅಧ್ಯಕ್ಷ ಹೆಚ್.ಕೆ.ಕನ್ನಪ್ಪ ಮತ್ತಿತರರಿದ್ದರು.

# ಕಾಂಗ್ರೆಸ್‌ಗೆ ಇಬ್ರಾಹಿಂ 'ಗುಡ್‌ಬೈ'

(1ನೇ ಪುಟದಿಂದ) ಇಟ್ಟಿದ್ದರು. ಆದರೆ ಯಾವುದೇ ಇವರ ಬೇಡಿಕೆಗಳಿಗೆ ಆ ಪಕ್ಷ ಸ್ಪಂದಿಸಿಲ್ಲ.

ಇಷ್ಟಾದರೂ ಇಂದು ತುರ್ತು ಪತ್ರಿಕಾಗೋಷ್ಠಿ ಕರೆದಿದ್ದ ಇಬ್ರಾಹಿಂ ಕಾಂಗ್ರೆಸ್ ತೊರೆಯುವುದನ್ನು ಅಧಿಕೃತವಾಗಿ ಪ್ರಕಟಿಸಿದ್ದಲ್ಲದೆ, ತಮ್ಮ ರಾಜೀನಾಮೆ ಪತ್ರವನ್ನು ಎಐಸಿಸಿ ಅಧ್ಯಕ್ಷೆ ಸೋನಿಯಾಗಾಂಧಿ ಮತ್ತು ರಾಜ್ಯ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಕಳುಹಿಸುತ್ತಿದ್ದೇನೆ ಎಂದು ತಿಳಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಆ ಪಕ್ಷದ ಮುಖಂಡರಿಗೆ ಧನ್ಯವಾದ ಹೇಳಿದ ಇಬ್ರಾಹಿಂ, ರಾಜ್ಯದ ದೃಷ್ಟಿಯಿಂದ ಹಾಗೂ ಸ್ವಾಭಿಮಾನದ ಕಾರಣಕ್ಕಾಗಿ ವಿಧಾನ ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡುವುದು ಹಾಗೂ ಕಾಂಗ್ರೆಸ್ ತೊರೆಯುವ ತೀರ್ಮಾನಕ್ಕೆ ಬಂದಿದ್ದೇನೆ ಎಂದರು.

ಈಗಾಗಲೇ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರೊಟ್ಟಿಗೆ ಚರ್ಚಿಸಿ ದ್ದೇನೆ. ಜೆಡಿಎಸ್ ಸೇರಬೇಕೆನ್ನುವುದು ನನ್ನ ಇಚ್ಛೆ. ಮತ್ತೊಮ್ಮೆ ದೇವೇಗೌಡರ ಜೊತೆ ಚರ್ಚಿಸಿ, ತೆನೆ ಹಿಡಿಯುವ ನಿರ್ಧಾರ ಕೈಗೊಳ್ಳುತ್ತೇನೆ ಎಂದರು.

ಕಾಂಗ್ರೆಸ್ ಮುಳುಗುತ್ತಿರುವ ಹಡಗು. ಪಂಜಾಬ್‌ನಲ್ಲಿ ಆಗಿರುವುದು ಕರ್ನಾಟಕದಲ್ಲೂ ಆಗುತ್ತದೆ. ಇದರ ವಿರುದ್ಧ ಹೋರಾಟ ಮಣ್ಣಿನ ಮಕ್ಕಳಿಗೆ ಮಾತ್ರ ಸಾಧ್ಯ. ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ನಾನು ಸೈದ್ಧಾಂ ತಿಕ ರಾಜಕಾರಣ ಮಾಡಿಕೊಂಡು ಬಂದವನು. ಜೆಡಿಎಸ್‌ನಲ್ಲಿ ನನ್ನ ಸಿದ್ಧಾಂತಕ್ಕೆ ಪೆಟ್ಟು ಬೀಳುವುದಿಲ್ಲ ಎಂಬ ವಿಶ್ವಾಸ ನನಗಿದೆ.

ರಾಜ್ಯದಲ್ಲಿ ಶೇಕಡ 27 ರಷ್ಟು ಮಂದಿ ಅಲ್ಪಸಂಖ್ಯಾತರಿದ್ದಾರೆ. ಕಳೆದ 70 ವರ್ಷಗಳ ಆಡಳಿತದಲ್ಲಿ ಕಾಂಗ್ರೆಸ್ ಈ ಸಮುದಾಯದ ಯಾವುದೇ ನಾಯಕರಿಗೂ ಮುಖ್ಯಮಂತ್ರಿ ಸ್ಥಾನ ಇಲ್ಲವೇ ರಾಜ್ಯಾಧ್ಯಕ್ಷ ಸ್ಥಾನ ನೀಡಲಿಲ್ಲ.

ಸಮುದಾಯದ ಶೇಕಡ 90 ರಷ್ಟು ಮತಗಳನ್ನು ಕಾಂಗ್ರೆಸ್‌ಗೆ ನೀಡುತ್ತೇವೆ. ಆದರೂ ಯಾವುದೇ ಅಧಿಕಾರ ಇದುವರೆಗೂ ದೊರೆತಿಲ್ಲ.

ಈ ಸಮುದಾಯವನ್ನು ಕೇವಲ ಮತಕ್ಕಾಗಿಯೇ ಇಟ್ಟುಕೊಂಡಿದ್ದಾರೆ. ಅಧಿಕಾರ ನೀಡುವ ಸಂದರ್ಭದಲ್ಲಿ ನಮ್ಮನ್ನು ಕಡೆ ಸ್ಥಾನಕ್ಕೆ ತಳ್ಳುತ್ತಾರೆ ಎಂದು ಇಬ್ರಾಹಿಂ ದೂರಿದರು.

# ನಿಟ್ಟುವಳ್ಳಿಯಲ್ಲಿ ಇಂದು 'ತವರು ಮನೆ' ನಾಟಕ ಪ್ರದರ್ಶನ

ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘ, ರಂಗ ಚೇತನ್ ಕಲಾ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರುಗಳು ಸಂಯುಕ್ತಾಶ್ರಯದಲ್ಲಿ ಶ್ರೀ ದುರ್ಗಾಂಬಿಕಾ ಜಾತ್ರೆ ಪ್ರಯುಕ್ತ 'ತವರು ಮನೆ' ನಾಟಕ ಪ್ರದರ್ಶನವು ನಿಟುವಳ್ಳಿ ಆಂಜನೇಯ ಬಡಾವಣೆಯ ಶ್ರೀ ಆಂಜನೇಯ ದೇವಸ್ಥಾನದ ಹತ್ತಿರವಿರುವ 60 ಅಡಿ ರಿಂಗ್ ರಸ್ತೆಯಲ್ಲಿ ಇಂದು ರಾತ್ರಿ 10.30ಕ್ಕೆ ನಡೆಯಲಿದೆ.

ಹಿರಿಯ ರಂಗಭೂಮಿ ಕಲಾವಿದ ಕೆ.ವೀರಯ್ಯ ಸ್ವಾಮಿ ಅವರ ತಂಡವು ಈ ನಾಟಕವನ್ನು ಪ್ರದರ್ಶಿಸಲಿದೆ. ಅಧ್ಯಕ್ಷತೆಯನ್ನು ಪಾಲಿಕೆ ಸದಸ್ಯೆ ಶ್ರೀಮತಿ ನಾಗರತ್ನಮ್ಮ ಕೃಷ್ಣಪ್ಪ ವಹಿಸುವರು. ಕಾರ್ಯಕ್ರಮವನ್ನು ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸುವರು. ಮುಖ್ಯ ಅತಿಥಿಗಳು : ಆರ್.ಎಸ್. ಶೇಖರಪ್ಪ, ರವಿಚಂದ್ರ, ಸವಿತಾ ಗಣೇಶ್ ಹುಲಮನಿ, ಮಂಜನಾಯ್ಕ, ಸಂತೋಷ್‌ಕುಮಾರ್, ಲಕ್ಷ್ಮಣ (ಧರ್ಮ), ಪಿ.ಕೆ. ಲಿಂಗರಾಜ್, ಭೀಮಾರೆಡ್ಡಿ, ಜಿ.ಆರ್. ನಾಗರಾಜ್, ಹೆಚ್. ಜಿ. ಉಮೇಶ್, ಶಿವಕುಮಾರ್ ಡಿ. ಶೆಟ್ಟರ್.

# ಸಾಹಿತ್ಯ ಕ್ಷೇತ್ರದಲ್ಲಿ ಪಾವಿತ್ರ್ಯತೆ ಕಾಪಾಡಿಕೊಳ್ಳಿ

(1ನೇ ಪುಟದಿಂದ) ಓದುತ್ತಾರೆ. ಈ ಹಿನ್ನೆಲೆಯಲ್ಲಿ ನಿಂದನೆಗಳನ್ನು ಇಲ್ಲಿಗೇ ನಿಲ್ಲಿಸಿ, ಕನ್ನಡ ಸಾಹಿತ್ಯ ಪರಿಷತ್ ಮೂಲಕ ಉತ್ತಮ ಸಾಂಸ್ಕೃತಿಕ, ಸಾಹಿತ್ಯಿಕ ಚಟುವಟಿಕೆಗಳನ್ನು ನಡೆಸಿ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡುತ್ತಾ, ಬಾವಿಯಲ್ಲಿ ನೀರು ಸೇದುವಾಗ ಒಬ್ಬರ ಕೊಡ ಪಾನ ಮತ್ತೊಬ್ಬರ ಕೊಡಪಾನಕ್ಕೆ ತಗಲುವುದು ಸಹಜ. ಅದಕ್ಕಾಗಿ ಜಗಳವಾಡಲು ಸಾಧ್ಯವೇ? ಹಿರಿಯರು ಕನ್ನಡ ಸಾಹಿತ್ಯ ಪರಿಷತ್ ಕಟ್ಟಿ ಬೆಳೆಸಿದ್ದಾರೆ. ಕಸಗುಡಿಸಿಕೊಂಡು ನೀರು ಹಾಕುತ್ತಾ ನಡೆಸಿಕೊಂಡು ಹೋಗುವ ಕೆಲಸವಷ್ಟೇ ನಿಮ್ಮದು. ಅದನ್ನು ಶ್ರದ್ಧೆಯಿಂದ ಮಾಡಿ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ರಾಜ್ಯಾಧ್ಯಕ್ಷ ಸ್ಥಾನದಲ್ಲಿದ್ದ ಮಹೇಶ್ ಜೋಷಿ ಅವರನ್ನು ಬೆಂಬಲಿಸುವಂತೆ ವಾಮದೇವಪ್ಪ ಅವರನ್ನು ಕೇಳಿದ್ದೆ. ಆದರೆ ಅವರು ಒಪ್ಪಲಿಲ್ಲ. ಆ ಕಾರಣಕ್ಕಾಗಿ ನಾನು ವಾಮದೇವಪ್ಪ ಅವರ ವಿರುದ್ಧ ಸ್ಪರ್ಧಿಸಿದ್ದ ಶಿವಕುಮಾರ ಕುರ್ಕಿ ಅವರ ಪರವಾಗಿ ಮತ ಯಾಚಿಸಿದ್ದೆ ಎಂದು ಶಾಸಕ ರವೀಂದ್ರನಾಥ್ ಹೇಳಿದರು. ಇದೀಗ ವಾಮದೇವಪ್ಪ ಗೆದ್ದಿದ್ದಾರೆ. ಉತ್ತಮ ಕೆಲಸಗಳನ್ನು ಮಾಡಲಿ ಎಂದು ಆಶಿಸಿದರು.

ಪದಗ್ರಹಣ ಎಂದರೆ ಬಾವುಟ ಕೊಡುವುದು, ಅಧಿಕಾರ ಹಸ್ತಾಂತರ ಮಾಡುವುದು ಎಂದು ತಿಳಿದಿದ್ದೆ. ಆದರೆ ಇಲ್ಲಿಯೂ ಅಸಮಾಧಾನಗಳಿರುವುದನ್ನು ಕಂಡೆ. ಇವೆಲ್ಲವನ್ನೂ ಬಿಟ್ಟು ಉತ್ತಮ ಕೆಲಸ ಮಾಡಿ ಎಂದು ಹೇಳಿದರು.

ಕಸಾಪ ಜಿಲ್ಲಾಧ್ಯಕ್ಷ ಬಿ.ವಾಮದೇಪ್ಪ ಮಾತನಾಡುತ್ತಾ, ಸರ್ಕಾರ ಸಾಹಿತ್ಯ ಪರಿಷತ್‌ಗೆ ಹೆಚ್ಚಿನ ಅನುದಾನ ನೀಡಲು ಸಿದ್ಧವಿದ್ದು, ದಾವಣ ಗೆರೆ ಜಿಲ್ಲೆಯನ್ನು ಆದರ್ಶ ಜಿಲ್ಲೆಯನ್ನಾಗಿಸಲು ಶ್ರಮಿಸಲಾಗುವುದು ಎಂದರು.

### ಅಧ್ಯಕ್ಷರು ತಮ್ಮ ಧೋರಣೆ ಬದಲಿಸಿಕೊಳ್ಳಲಿ : ಕುರ್ಕಿ

(1ನೇ ಪುಟದಿಂದ) ಮುಖ್ಯವಾಗಿರುತ್ತದೆ. ಆದರೆ ಅಧ್ಯಕ್ಷರು ನನ್ನನ್ನು ಕಡೆಗಣಿಸಿದ್ದಾರೆ. ಮೂರ್ನಾಲ್ಕು ಕಾರ್ಯಕ್ರಮಗಳಾದರೂ ನನ್ನನ್ನು ಆಹ್ವಾನಿಸಿಲ್ಲ. ಇಂದಿನ ಕಾರ್ಯಕ್ರಮಕ್ಕೆ ನಿನ್ನೆ ರಾತ್ರಿ ಆಹ್ವಾನ ಪತ್ರಿಕೆ ನೀಡಲಾಗಿದೆ. ನಾನಷ್ಟು ಬೇಡವಾದೆನಾ? ಎಂದು ಭಾವುಕರಾದರು.

ನನ್ನ ಅವಧಿಯಲ್ಲಿ ನಿಕಟಪೂರ್ವ ಅಧ್ಯಕ್ಷರಿಲ್ಲದ ಒಂದೂ ಆಹ್ವಾನ ಪತ್ರಿಕೆ ಇರಲಿಲ್ಲ. ಅವರ ಸಲಹೆ ಪಡೆದೇ ಕಾರ್ಯ ನಿರ್ವಹಿಸುತ್ತಿದ್ದೆ ಎಂದರು.

ಪಂಡಿತಾರಾಧ್ಯ ಶ್ರೀಗಳ ಸಾನ್ನಿಧ್ಯದಲ್ಲಿ ರಾಜ್ಯಾಧ್ಯಕ್ಷ ಮನು ಬಳಿಗಾರ್ ಅಧ್ಯಕ್ಷತೆಯಲ್ಲಿ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಿದ್ದ ಮಹಲಿಂಗ ರಂಗ ಗ್ರಂಥಾಲಯವನ್ನು ಮತ್ತೊಮ್ಮೆ ಉದ್ಘಾಟಿಸುವ ಅಗತ್ಯವಿರಲಿಲ್ಲ ಎಂದರು.

ತೂಕದ ಕಲ್ಲಿನ ಮೇಲೆ ನಾಯಿ ಉಚ್ಚೆ ಹೊಯ್ದರೆ ತೂಕದ ಮೌಲ್ಯ ಕಡಿಮೆಯಾಗುವುದಿಲ್ಲ ಎಂದ ಕುರ್ಕಿ, ನನ್ನಿಂದ ತಪ್ಪಾದರೆ ಯಾವುದೇ ಶಿಕ್ಷೆ ಸ್ವೀಕರಿಸಲು ಸಿದ್ಧನಿದ್ದೇನೆ. ನನಗಾದ ನೋವು ಮತ್ತೊಬ್ಬರಿಗಾಗಬಾರದು. ಅಧ್ಯಕ್ಷರು ತಮ್ಮ ಧೋರಣೆಗಳನ್ನು ಬದಲಿಸಿಕೊಳ್ಳಬೇಕು. ನಾವಿಲ್ಲಿ ಯಾರೂ ಶಾಶ್ವತವಲ್ಲ. ನಮ್ಮ ನಡವಳಿಕೆಗಳು ಮುಂಬರುವ ಅಧ್ಯಕ್ಷರಿಗೆ ಆದರ್ಶಪ್ರಾಯವಾಗಿರಬೇಕು ಎಂದರು.

### ಬೈದವರ ಬಂಧುಗಳೆನ್ನುವೆ : ಬಿ. ವಾಮದೇವಪ್ಪ

(1ನೇ ಪುಟದಿಂದ) ಗೊತ್ತಿದೆ. ಅದರ ಬಗ್ಗೆ ಮತ್ತೆ ಪ್ರಸ್ತಾಪಿಸುವುದು ಸರಿಯಲ್ಲ ಎಂದರು.

ಮಹಲಿಂಗ ರಂಗ ಗ್ರಂಥಾಲಯದಲ್ಲಿನ ಪುಸ್ತಕಗಳನ್ನು ಓದಲು ಸಾರ್ವಜನಿಕರ ಮನೆಗೆ ಕೊಂಡೊಯ್ಯುವ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತೇ ಹೊರತು, ಗ್ರಂಥಾಲಯವನ್ನಲ್ಲ ಎಂದು ವಾಮದೇವಪ್ಪ ಸ್ಪಷ್ಟಪಡಿಸಿದರು.


ಸೊಕ್ಕು, ಅಹಂಕಾರ ನನ್ನಲ್ಲಿಲ್ಲ. ಪೂಜ್ಯರ ಆಶಯದಂತೆ ನಡೆದಿದ್ದೇನೆ. ನನ್ನೆಲ್ಲಾ ನೋವುಗಳನ್ನು ಮಾಜಿ ಅಧ್ಯಕ್ಷ ಉಜ್ಜಿನಪ್ಪನವರ ಬಳಿ ಹೇಳಿಕೊಂಡಿದ್ದೇನೆ. ನೋವಾಗುವ ಘಟನೆಗಳು ನಡೆದಿವೆ ಎಂದಾದರೆ ಅವರ ತಪ್ಪೇನಾದರೂ ಇದೆಯಾ ಎಂಬ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು ಎಂದು ಮಂಜುನಾಥ ಕುರ್ಕಿಯವರುನ್ನುದ್ದೇಶಿಸಿ ಹೇಳಿದರು.

ಸರ್ಕಾರ ಪ್ರತಿ ಜಿಲ್ಲಾ ಸಮ್ಮೇಳನಕ್ಕೆ 8 ಲಕ್ಷ ರೂ. ಹಾಗೂ ತಾಲ್ಲೂಕು ಸಮ್ಮೇಳನಕ್ಕೆ 3 ಲಕ್ಷ ರೂ. ನೀಡಲು ಮುಂದಾಗಿದೆ. ಪ್ರತಿ ತಾಲ್ಲೂಕು ಕೇಂದ್ರದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸರ್ಕಾರದೊಂದಿಗೆ ಸಮಾಲೋಚಿಸಲಾಗಿದೆ. ಸಚಿವರು, ಶಾಸಕರ ಸಹಕಾರ ಪಡೆದು, ಮುಂದಿನ ಐದು ವರ್ಷಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಕನ್ನಡ ಭವನ ನಿರ್ಮಿಸಿ, ಅರ್ಥ ಪೂರ್ಣ ಕಾರ್ಯಕ್ರಮಗಳನ್ನು ನಡೆಸುವ ಆಶಯ ಇರುವುದಾಗಿ ಹೇಳಿದರು.

ಆರಂಭದಲ್ಲಿ ಸೇವಾ ಹಸ್ತಾಂತರ ಮಾಡಿದ ನಿಕಟಪೂರ್ವ ಜಿಲ್ಲಾಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಮಾತನಾಡುತ್ತಾ, ಸಾಹಿತ್ಯ ಪರಿಷತ್ ಯಾರ ಪಿತ್ರಾರ್ಜಿತ ಆಸ್ತಿಯಲ್ಲ. ಶಾಶ್ವತವೂ ಅಲ್ಲ. ನಮ್ಮ ಕಾರ್ಯಗಳು ಮುಂಬರುವ ಅಧ್ಯಕ್ಷರಿಗೆ ಆದರ್ಶಪ್ರಾಯವಾಗಿರಬೇಕು ಎಂದು ಹೇಳಿದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರುಗಳಾದ ಎ.ಆರ್. ಉಜ್ಜಿನಪ್ಪ, ಎಸ್.ಹೆಚ್. ಹೂಗಾರ್, ಗೌರವ ಕೋಶಾಧ್ಯಕ್ಷ ರಾಘವೇಂದ್ರ ನಾಯರಿ ಇತರರು ಉಪಸ್ಥಿತರಿದ್ದರು. ರುದ್ರಾಕ್ಷಿಬಾಯಿ ಮತ್ತು ತಂಡವರ ನಾಡಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ರೇವಣಸಿದ್ದಪ್ಪ ಅಂಗಡಿ ನಿರೂಪಿಸಿದರು. ದಿಳ್ಯೆಪ್ಪ ಸ್ವಾಗತಿಸಿದರು. ಜಿಲ್ಲಾ ಹಾಗೂ ತಾಲ್ಲೂಕು ಅಧ್ಯಕ್ಷರು, ಪದಾಧಿಕಾರಿಗಳು ಸೇವಾ ದೀಕ್ಷೆ ಪಡೆದರು.


## ಎಂ.ಜಿ. ನಾರಾಯಣ ರಾವ್ ನಿಧನ



ದಾವಣಗೆರೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ 6ನೇ ಕ್ರಾಸ್, ಹೊಸ ಕೋರ್ಟ್ ಹಿಂಭಾಗದ ವಾಸಿ, **ಹನುಮಾನ್ ಮೋಟಾರ್ಸ್** ಮಾಲೀಕರಾದ

**ಶ್ರೀ ಎಂ.ಜಿ. ನಾರಾಯಣ ರಾವ್**

ಅವರು ದಿನಾಂಕ 12.03.2022ರ ಶನಿವಾರ ರಾತ್ರಿ 10.15ಕ್ಕೆ ನಿಧನರಾದರು. ಮೃತರಿಗೆ 58 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗು ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.03.2022ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ



## ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ ನ್ಯಾಯಾಲಯ, ಹರಿಹರ.

**ಎಫ್.ಡಿ.ಪಿ. ನಂ. 12/2019**

ಅರ್ಜಿದಾರರು : ಶ್ರೀಮತಿ ಶಾರದಾ @ ಅಮ್ಮಯ್ಯ ಕೆ.ಹೆಚ್. ತಂದೆ ಲೇಟ್ ಕೆ. ಹಾಲಪ್ಪ ಕೋಂ ಹೆಚ್. ವಸಂತ ವಯಸ್ಸು 64 ವರ್ಷ, ವಾಸ : 2036/66ಎ, ರವಿತೇಜ್ ನಿಲಯ, ವಾಣಿ ರೈಸ್ ಮಿಲ್ ಹಿಂಭಾಗ, 1ನೇ ಮೇನ್, 11ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ.

ವಿರುದ್ಧ - ಎದುರುದಾರರು : ಕೆ. ಹನುಮಂತಪ್ಪ ಮತ್ತು ಇತರರು

ಎದುರುದಾರ ನಂ. 5 : ಶ್ರೀಮತಿ ಕೆ.ಹೆಚ್. ಸರೋಜ ತಂದೆ ಕೆ. ಹಾಲಪ್ಪ ಕೋಂ ಹೆಚ್. ಶಿವಪ್ರಕಾಶ್, ವಯಸ್ಸು 62 ವರ್ಷ, ವಾಸ : ಚಂದ್ರ ಲೇಔಟ್, ಮುಖ್ಯರಸ್ತೆಯ ಹತ್ತಿರ, ಆದರ್ಶ ಎಲೆಕ್ಟ್ರಾನಿಕ್ಸ್ ಹತ್ತಿರ, ಬೆಂಗಳೂರು ನಗರ-560040

**ಎದುರುದಾರ ನಂ. 5 ರವರಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ರೂಲ್ 20 (ಎ)ರ ಪ್ರಕಾರ ಅರ್ಜಿಯ ಸಮನ್ಸ್**

ಈ ಮೇಲ್ಕಂಡ ಅರ್ಜಿಯ ಅರ್ಜಿದಾರರು ಎದುರುದಾರರ ವಿರುದ್ಧ ಈ ಮೇಲ್ಕಂಡ ಅರ್ಜಿಯನ್ನು ಪಾಲು ವಿಭಾಗ ಕೋರಿ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಈ ಮೇಲ್ಕಂಡ ಅರ್ಜಿಯಲ್ಲಿ ಹೇಳಿರುವ ಎದುರುದಾರ ನಂ. 5ರವರಿಗೆ ಅರ್ಜಿಯ ನೋಟಿಸನ್ನು ಗೌರವಾನ್ವಿತ ನ್ಯಾಯಾಲಯವು ಹೊರಡಿಸಿದ್ದರೂ ಸಹ ಪಡೆದಿರುವುದಿಲ್ಲ ಮತ್ತು ಅಂಚೆ ಮೂಲಕ ಕಳುಹಿಸಿದ ನೊಂದಾಯಿತ ನೋಟಿಸ್ ಕೂಡ ಪಡೆದುಕೊಂಡಿರುವುದಿಲ್ಲ.

ಆದ್ದರಿಂದ ಗೌರವಾನ್ವಿತ ನ್ಯಾಯಾಲಯವು ನಿಮಗೆ ಈ ಮೂಲಕ ತಿಳಿಸುವುದೇನೆಂದರೆ, ನೀವಾಗಲೀ ಅಥವಾ ನಿಮ್ಮ ವಕೀಲರಾಗಲೀ ಸದರಿ ದಿನಾಂಕ : 29.4.2022 ರಂದು ಬೆಳಿಗ್ಗೆ 11.00 ಗಂಟೆಗೆ ಸದರಿ ನ್ಯಾಯಾಲಯದಲ್ಲಿ ಹಾಜರಾಗಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಪ್ರಕರಣವನ್ನು/ದಾವೆಯನ್ನು ಏಕಪಕ್ಷೀಯವಾಗಿ ಇತ್ಯರ್ಥ ಪಡಿಸಲಾಗುವುದು ತಿಳಿಯಿರಿ.

ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ : 9.3.2022 ರಂದು ನೀಡಲಾಯಿತು.

**ಅರ್ಜಿದಾರರ ಪರ ವಕೀಲರು**
**ಸಹಿ/- ಎನ್.ಬಿ. ಗಂಗಾಧರಪ್ಪ**
**ವಕೀಲರು**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು**
**ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹರಿಹರ.**



## ಕಾರ್ ಡ್ರೈವರ್ ಟಿ.ಬಸವರಾಜಪ್ಪ ನಿಧನ



ದಾವಣಗೆರೆ ಸಿಟಿ ಬಂಬೂಬಜಾರ್ ವಾಸಿ, ಕಾರ್ ಡ್ರೈವರ್ ಟಿ. ಬಸವರಾಜಪ್ಪ (78) ಅವರು ದಿನಾಂಕ 12.03.2022ರ ಶನಿವಾರ ಸಂಜೆ 4 ಗಂಟೆಗೆ ನಿಧನರಾಗಿದ್ದಾರೆ. ನಾಲ್ವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.03.2022ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.



## ಕೊಟ್ಟೂರು ಎಂ. ಅನ್ನಪೂರ್ಣಮ್ಮ ನಿಧನ



ವಿಜಯನಗರ ಜಿಲ್ಲೆ ಕೊಟ್ಟೂರು ತಾಲ್ಲೂಕಿನ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ದಿ. ಎಂ. ಕೊಟ್ರಬಸಯ್ಯನವರ ಧರ್ಮಪತ್ನಿ ಶ್ರೀಮತಿ ಎಂ. ಅನ್ನಪೂರ್ಣಮ್ಮ (80) ಇವರು ದಿನಾಂಕ 12.03.2022ರ ಶನಿವಾರ ರಾತ್ರಿ 9.05ಕ್ಕೆ ನಿಧನರಾದರು. ಮೃತರ ಅಂತ್ಯಕ್ರಿಯೆಯು ದಿನಾಂಕ: 13.03.2022ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ಕೊಟ್ಟೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.


# ಟಿವಿ ಸ್ಟೇಷನ್ ಕೆರೆಯಲ್ಲಿ ಮಹಿಳೆ ಶವ ಪತ್ತೆ



ದಾವಣಗೆರೆ, ಮಾ. 12- ನಗರದ ಟಿವಿ ಸ್ಟೇಷನ್ ಕೆರೆಯಲ್ಲಿ ಅಪರಿಚಿತ ಮಹಿಳೆಯ ಶವ ಶನಿವಾರ ಬೆಳಿಗ್ಗೆ 9.30ರ ವೇಳೆಗೆ ಪತ್ತೆಯಾಗಿದೆ. ಮಹಿಳೆಯ ಹೆಸರು ಅಥವಾ ವಿಳಾಸ ಪತ್ತೆಯಾದಲ್ಲಿ ಕೆಟಿಜೆ ನಗರ ಪೊಲೀಸ್ ಠಾಣೆ (94808 03250, 9740290666) ಯನ್ನು ಸಂಪರ್ಕಿಸಬಹುದು.

# ಕಚೇರಿಗಳಿಗೆ ರೈತರ ಅಲೆದಾಟ ತಪ್ಪಲಿದೆ

(1ನೇ ಪುಟದಿಂದ) ಪಹಣಿ, ಜಮೀನಿನ ಅಟ್ಲಾಸ್ ನಕ್ಷೆ ಹಾಗೂ ಇನ್ನಿತರೆ ಪ್ರಮಾಣ ಪತ್ರಗಳನ್ನು ಪಡೆಯಬಹುದಾಗಿದೆ. ಎಲ್ಲಾ ಗ್ರಾಮದ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.


ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಸ್.ಎ ರವೀಂದ್ರನಾಥ್ ಮಾತನಾಡಿ, ಸರ್ಕಾರದ ಯೋಜನೆಗಳು ಯಾವುದೇ ತೊಂದರೆಯಾಗದಂತೆ ಜನರಿಗೆ ತಲುಪಿಸುವ ಉದ್ದೇಶದಿಂದ ಯೋಜನೆಯನ್ನು ಜಾರಿಗೆ ತರಲಾಗಿದೆ, ಪ್ರತಿಯೊಬ್ಬರು ಯೋಜನೆಯ ಲಾಭ ಪಡೆಯಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, 'ಕಂದಾಯ ದಾಖಲೆ ಮನೆ ಬಾಗಿಲಿಗೆ' ಎಂಬುದು ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಇದರಿಂದ ರೈತರಿಗೆ ಒಂದು ಬಾರಿ ಉಚಿತವಾಗಿ ಕಂದಾಯ ದಾಖಲೆಗಳನ್ನು ಅವರ ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ, ಮತ್ತು ಕಛೇರಿಗೆ ಅಲೆದಾಡುವುದು ತಪ್ಪಿಸಿದಂತಾಗುತ್ತದೆ. ಅಲ್ಲದೆ ಕಾರ್ಯಕ್ರಮದಿಂದ ಉಚಿತ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆಯುವುದರಿಂದ ಫಲಾನುಭವಿಗಳು ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನ ಪಡೆಯಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ಇದೇ ವೇಳೆ ಫಲಾನುಭವಿಗಳಾದ ಶಂಕ್ರಪ್ಪ, ಹನುಮಂತಪ್ಪ, ಬಿ.ಪಿ ಕೆಂಚಪ್ಪ ರವರ ಮನೆ ಬಾಗಿಲಿಗೆ ಸಾಂಕೇತಿಕವಾಗಿ ಪಹಣಿ, ಜಾತಿ ಪ್ರಮಾಣ ಪತ್ರ, ಜಮೀನಿನ ಅಟ್ಲಾಸ್ ನಕ್ಷೆಯ ದಾಖಲಾತಿಗಳನ್ನು ವಿತರಿಸಲಾಯಿತು.

ಇದೆ ಸಂದರ್ಭದಲ್ಲಿ ತಹಶೀಲ್ದಾರ್ ಬಸವರಾಜ್ ಕೊಟ್ಟೂರು, ಗ್ರಾಮ ಪಂಚಾಯತಿ ಅಧ್ಯಕ್ಷ ಸಿದ್ದೇಶ್ ಹಾಗೂ ಉಪಾಧ್ಯಕ್ಷರು, ಸದಸ್ಯರು, ಗ್ರಾಮ ಪಂಚಾಯತಿ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು, ಶಿಕ್ಷಕರು, ವಿದ್ಯಾರ್ಥಿಗಳು, ಗ್ರಾಮಸ್ಥರು ಭಾಗವಹಿಸಿದ್ದರು.

## ಪದವಾಣಿ-14

ರಚನೆ : ಮಮತಾ ರಾಧಾಕೃಷ್ಣ
ದಾವಣಗೆರೆ.




**ಎಡದಿಂದ ಬಲಕ್ಕೆ :**

| | |
|---|---|
| 1) ವಿಷ್ಣುವಿನ ಚರಿತ್ರೆ ಹೇಳುವುದು | 4 |
| 3) ನಾಯಕನಲ್ಲ, ಗಣೇಶ | 4 |
| 5) ವನದಲ್ಲಿ ಬೀಸಿದ ಗಾಳಿ | 3 |
| 6) ಧ್ಯಾನಕ್ಕೆ ಹೆಸರಾದ ಪಕ್ಷಿ | 2 |
| 8) ಬಾನಿನಲ್ಲಿರುವ ನೇಸರ | 2 |
| 9) ಇದು ಅನ್ಯಾಯವಲ್ಲ | 2 |
| 10) ಅಕ್ಕನ ಗಂಡ | 2 |
| 11) ಕತ್ತರಿಸುವ ಸಾಧನ | 2 |
| 12) ಮೈ ಮೇಲೆ ಕುಳಿತ ಹಕ್ಕಿ | 2 |
| 13) ಈಕೆ ಕುಂತಿಯ ಸವತಿ | 2 |
| 14) ನೀರಿನ ಹನಿ | 2 |
| 15) ನಾರಿ ಮುನಿದರೆ ಆಗುವಳು | 2 |
| 18) ದೊಡ್ಡ ಹೊಳೆ | 2 |
| 20) ಗಣಪತಿಯ ವಾಹನ | 3 |
| 21) ವೇದ ಮಾಡಿದ ಮನವಿ | 4 |
| 22) ಬಾಳೆ ಹಣ್ಣಿನ ಖಾದ್ಯ | 4 |

**ಮೇಲಿನಿಂದ ಕೆಳಕ್ಕೆ :**

| | |
|---|---|
| 1) ಈತ ಹೊಸಬನಲ್ಲ | 3 |
| 2) ತೆಪ್ಪಗೆ ಬಂದ ಮೂರ್ಖ | 3 |
| 3) ನಯವಾಗಿ ತೋರಿದ ನಮ್ರತೆ | 3 |
| 4) ಅರ್ಧ ಚಂದ್ರಾಕೃತಿ | 3 |
| 7) ಭಾರತದ ದಕ್ಷಿಣ ತುದಿ | 5 |
| 8) ಹೆಂಡತಿಯ ಸೋದರ | 5 |
| 15) ಮಾನವಂತಳಾದ ಮಹಿಳೆ | 3 |
| 16) ಮಾದರಿ-ಪರ್ಯಾಯ ಪದ | 3 |
| 17) ಗಂಡಾಡು | 3 |
| 19) ದಿನವೂ ಬರುವ ಮಂತ್ರಿ | 3 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 13ರ ಉತ್ತರಗಳು :**

**ಎಡದಿಂದ ಬಲಕ್ಕೆ : 1) ಉದ್ಯಮ 3) ಕುಲಾವಿ 5) ತಬಲ 6) ದಾನಶೂರ 7) ವನೌಕಸ 9) ಸರಿಗಮ 12) ವಜ್ರಕಾಯ 14) ದುಮ್ಮಾನ 15) ರಥಾಂಗ 16) ಸತ್ಕಾರ**

**ಮೇಲಿನಿಂದ ಕೆಳಕ್ಕೆ : 1) ಉಪವನ 2) ಮತಾಂತರ 3) ಕುಶೀವ 4) ವಿಧ್ವಂಸಕ 6) ದಾರ್ವಸ (ಸರ್ವದಾ) 8) ಸಹಾಯ 10) ರಿಕ್ತಕರ 11) ಮದುಮಗ 12) ವನವಾಸ 13) ಕಾರಾಗಾರ**

## ಯುಬಿಡಿಟಿ ಕಾಲೇಜಿಗೆ ಐದು ಚಿನ್ನ, 13 ರ್‍ಯಾಂಕ್

ದಾವಣಗೆರೆ, ಮಾ.12- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಯುಬಿಡಿಟಿ ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು 2020-21 ನೇ ಸಾಲಿನ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಗೈದಿದ್ದಾರೆ. 21 ನೇ ಘಟಿಕೋತ್ಸವ ಸಮಾರಂಭದಲ್ಲಿ ಐದು ಚಿನ್ನದ ಪದಕ ಹಾಗೂ 13 ರ್‍ಯಾಂಕ್‌ಗಳನ್ನು ಪಡೆದಿದ್ದಾರೆ.

ಬಿ.ಇ. ಇಂಡಸ್ಟ್ರೀಯಲ್ ಪ್ರೊಡಕ್ಷನ್ ಮತ್ತು ಇಂಜಿನಿಯರಿಂಗ್ ವಿಭಾಗದಲ್ಲಿ ಎಂ. ಸುಷ್ಮ 1 ನೇ ರ್‍ಯಾಂಕ್ ಮತ್ತು ಚಿನ್ನದ ಪದಕ, ಜಿ. ಮಂಜುಳ 2 ನೇ ರ್‍ಯಾಂಕ್, ಚೇತನಾ ಎಂ. ದೊಡ್ಡಗೌಡರ್ 3 ನೇ ರ್‍ಯಾಂಕ್ ಗಳಿಸಿದ್ದಾರೆ.

ಎಲೆಕ್ಟ್ರಾನಿಕ್ಸ್ ಅಂಡ್ ಇನ್‌ಸ್ಟ್ರುಮೆಂಟೇಶನ್ ಇಂಜಿನಿಯರಿಂಗ್ ವಿಭಾಗದಲ್ಲಿ ದಿವ್ಯ ಸಿನ್ಹ 5 ನೇ ರ್‍ಯಾಂಕ್ ಪಡೆದಿದ್ದಾರೆ.

ಎಂ.ಟೆಕ್. ನ ಕಂಪ್ಯೂಟರ್ ಏಡೆಡ್ ಸ್ಟ್ರಕ್ಚರಲ್ ಇಂಜಿನಿಯರಿಂಗ್‌ನಲ್ಲಿ ಎಂ. ಪದ್ಮಶ್ರಿ 2 ನೇ ರ್‍ಯಾಂಕ್, ಸಂಜಯ್ ದ್ರಾವಿಡ್ ಎನ್.ಪಿ. 3 ನೇ ರ್‍ಯಾಂಕ್, ಕೆ. ಮಂಜುನಾಥ 4 ನೇ ರ್‍ಯಾಂಕ್ ಪಡೆದಿದ್ದಾರೆ. ಎನ್ವಿರಾನ್‌ಮೆಂಟಲ್ ಇಂಜಿನಿಯರಿಂಗ್‌ನಲ್ಲಿ ಎಂ.ಎ. ಚನ್ನಬಸಪ್ಪ 2ನೇ ರ್‍ಯಾಂಕ್, ಪವರ್ ಸಿಸ್ಟಮ್ ಇಂಜಿನಿಯರಿಂಗ್‌ನಲ್ಲಿ ಹೆಚ್.ಟಿ. ಸವಿತಾ 1 ನೇ ರ್‍ಯಾಂಕ್ ಮೂರು ಚಿನ್ನದ ಪದಕಗಳನ್ನು, ಎಸ್. ಕಾವ್ಯಶ್ರೀ 2 ನೇ ರ್‍ಯಾಂಕ್ ಗಳಿಸಿದ್ದಾರೆ.

ಡಿಜಿಟಲ್ ಕಮ್ಯೂನಿಕೇಶನ್ ಮತ್ತು ನೆಟ್ ವರ್ಕಿಂಗ್ ವಿಭಾಗದಲ್ಲಿ ಪ್ರಿಯಾಂಕ್ ಯು. ಲಮಾಣಿ 1 ನೇ ರ್‍ಯಾಂಕ್ ಮತ್ತು ಚಿನ್ನದ ಪದಕ, ರುಕ್ಸಾನಾ ಬಾನು 3 ನೇ ರ್‍ಯಾಂಕ್, ಮೆಹನಾಜ್ ಅಂಜುಮ್ ಲೊಹರ್ 4ನೇ ರ್‍ಯಾಂಕ್ ಪಡೆದಿದ್ದಾರೆ.

# ಸಮರ್ಪಕ ತ್ಯಾಜ್ಯ ವಿಲೇವಾರಿ ಎಲ್ಲರ ಜವಾಬ್ದಾರಿ



ರಾಷ್ಟ್ರೀಯ ಹಸಿರು ಪ್ರಾಧಿಕಾರದ ಅಧ್ಯಕ್ಷ ಸುಭಾಷ್ ಬಿ.ಅಡಿ

ದಾವಣಗೆರೆ,ಮಾ.12- ತ್ಯಾಜ್ಯ ವಿಲೇವಾರಿ ಎಲ್ಲರ ಜವಾಬ್ದಾರಿಯಾಗಿದೆ. ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ನಾಗರಿಕರೆಲ್ಲರೂ ಕೈಜೋಡಿಸಿ, ಈ ಕೆಲಸವನ್ನು ಸಮರ್ಪಕವಾಗಿ ಮಾಡಿದಲ್ಲಿ ತಮ್ಮ ಪರಿಸರವನ್ನು ಸ್ವಚ್ಛ ಮತ್ತು ಸುಂದರವಾಗಿಟ್ಟುಕೊಳ್ಳಬಹುದು ಎಂದು ರಾಷ್ಟ್ರೀಯ ಹಸಿರು ಪ್ರಾಧಿಕಾರದ ಅಧ್ಯಕ್ಷ ಸುಭಾಷ್ ಬಿ.ಅಡಿ ಹೇಳಿದರು.

ಜಿಲ್ಲಾಡಳಿತ, ಮಹಾನಗರಪಾಲಿಕೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ಇಂದು ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಘನ ತ್ಯಾಜ್ಯ ವ್ಯವಸ್ಥಾಪನಾ ನಿಯಮಗಳು 2016 ರನ್ವಯ ಘನ ತ್ಯಾಜ್ಯ ಸಂಗ್ರಹ ಹಾಗೂ ವಿಲೇವಾರಿ ಬಗ್ಗೆ ಏರ್ಪಡಿಸಲಾಗಿದ್ದ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಸ್ವಚ್ಛತೆ ಎಲ್ಲರ ಕನಸು. ಇದನ್ನು ನನಸು ಮಾಡಬೇಕಾದರೆ ಎಲ್ಲರೂ ಕೈಜೋಡಿಸಬೇಕೆಂದರು.

ಎಲ್ಲ ನಗರಗಳಲ್ಲಿ ಪ್ರತಿದಿನ ಲಕ್ಷಾಂತರ, ಟನ್‌ಗಟ್ಟಲೆ ತ್ಯಾಜ್ಯ ಉತ್ಪಾದನೆ ಆಗುತ್ತಲೇ ಇರುತ್ತದೆ. ಇದನ್ನು ಸಮರ್ಪಕವಾಗಿ ವಿಲೇವಾರಿ ಮಾಡದಿದ್ದರೆ ಮಳೆಗಾಲದಲ್ಲಿ ಇದು ಕರಿ ದ್ರವವಾಗಿ ನೀರಿನೊಂದಿಗೆ ಭೂಮಿ ಸೇರಿ ವಿಷವಾಗುತ್ತದೆ ಮತ್ತು ನಮಗೇ ಮಾರಕವಾಗುತ್ತದೆ. ಈ ಕಸದ ನಿಯಂತ್ರಣಕ್ಕಾಗಿ ಸರ್ಕಾರ 2016 ರಲ್ಲಿ ಘನ ತ್ಯಾಜ್ಯ ವ್ಯವಸ್ಥಾಪನಾ ನಿಯಮಗಳನ್ನು ಜಾರಿಗೆ ತಂದಿದೆ.

ಈ ನಿಯಮಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕಾದರೆ ಈ ಕುರಿತು ಅರಿವು ಮತ್ತು ಜಾಗೃತಿ ಬೇಕು. ಈ ನಿಟ್ಟಿನಲ್ಲಿ ಇಂದು ಜನಪ್ರತಿನಿಧಿಗಳು ಸೇರಿದಂತೆ, ಎಲ್ಲರಿಗೂ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಮನೆಯಿಂದಲೇ ವಿವಿಧ ರೀತಿಯ ಕಸ ಉತ್ಪಾದನೆಯಾಗುತ್ತದೆ. ಕಸವನ್ನು ಪ್ರತ್ಯೇಕಿಸುವ ಕೆಲಸ ಸ್ಥಳೀಯ ಸಂಸ್ಥೆಗಳದ್ದಲ್ಲ. ಬದಲಾಗಿ ಪ್ರತಿ ಮನೆಯಲ್ಲಿ ಹಸಿ ಕಸ, ಒಣ ಕಸ ಮತ್ತು ಹಾನಿಕಾರಕ (ಸ್ಯಾನಿಟರ್ ನ್ಯಾಪ್ಕಿನ್, ಡೈಪರ್, ಮೆಡಿಸಿನ್ ವೇಸ್ಟ್ ಇತ್ಯಾದಿ) ಕಸಗಳೆಂದು ವಿಂಗಡಿಸಿ ಸ್ಥಳೀಯ ಸಂಸ್ಥೆಗಳ ವಾಹನಕ್ಕೆ ನೀಡಬೇಕು. ಈ ರೀತಿ ಕಸ ವಿಂಗಡಿಸಿ ನೀಡುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದೆ.

ನಗರದ 45 ವಾರ್ಡುಗಳೂ ಭಿನ್ನ. ಈ ಭಿನ್ನತೆಗೆ ಅನುಗುಣವಾಗಿ ಕಸ ನಿರ್ವಹಣೆ ಕುರಿತು ಆಯಾ ಸದಸ್ಯರು ಸಮಗ್ರ ಮಾಹಿತಿ ಸಂಗ್ರಹಿಸಿ, ಇಂಜಿನಿಯರಿಂಗ್ ವಿದ್ಯಾರ್ಥಿಗಳ ನೆರವು ಪಡೆದು, ಮೈಕ್ರೊ ಪ್ಲಾನ್ ತಯಾರಿಸಿ ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ ಶ್ರೀನಿವಾಸಲು ಮಾತನಾಡಿ, ಕಸ ವಿಲೇವಾರಿ ವ್ಯವಸ್ಥೆ ಜಟಿಲವಾಗಿದೆ. ಎಷ್ಟೋ ಬಾರಿ ಹಣ ಖರ್ಚು ಮಾಡಿ, ಗೊತ್ತಿದ್ದೂ ತಪ್ಪು ಮಾಡುತ್ತೇವೆ. ಕಸ ನಿರ್ವಹಣೆಯಲ್ಲಿ ಅವೈಜ್ಞಾನಿಕತೆಯನ್ನು ಕಾಣುತ್ತಿದ್ದೇವೆ. ಆದ್ದರಿಂದ ವಿವಿಧ ವಲಯಗಳ ಪಾಲುದಾರರಲ್ಲಿ ಈ ಬಗ್ಗೆ ಅರಿವು ಮೂಡಿಸಿ, ತ್ಯಾಜ್ಯ ವಿಲೇವಾರಿ ಕುರಿತಾದ ನಿಯಮಾವಳಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಿದೆ ಎಂದರು.

ಪಾಲಿಕೆ ಸದಸ್ಯ ಎ. ನಾಗರಾಜ್, ಮಂಜುನಾಥ್, ಚಮನ್‌ಸಾಬ್, ವಕೀಲರಾದ ಸುರೇಶ್ ಮುಂತಾದವರು ತ್ಯಾಜ್ಯ ವಿಲೇವಾರಿ, ಪ್ಲಾಸ್ಟಿಕ್ ಬಳಕೆ, ಹಂದಿ-ನಾಯಿ ಹಾವಳಿಗೆ ಸಂಬಂಧಿಸಿದಂತೆ ಸಮಸ್ಯೆಗಳ ಕುರಿತು ಅಧ್ಯಕ್ಷರ ಗಮನ ಸೆಳೆದರು.

ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಥ್, ಉಪಮಹಾಪೌರರಾದ ಗಾಯತ್ರಿಬಾಯಿ ಖಂಡೋಜಿರಾವ್, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿ.ಪಂ ಸಿಇಓ ಡಾ.ವಿಜಯ ಮಹಾಂತೇಶ್ ದಾನಮ್ಮನವರ್, ಎಸ್‌ಪಿ ಸಿ.ಬಿ.ರಿಷ್ಯಂತ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಪೌರಾಡಳಿತ ನಿರ್ದೇಶನಾಲಯದ ಘನತ್ಯಾಜ್ಯ ವಿಲೇವಾರಿ ಕಾರ್ಯಪಾಲಕ ಅಭಿಯಂತರ ಸ್ನೇಹಲತ, ಹಿರಿಯ ಪರಿಸರ ಅಧಿಕಾರಿ ಮುರುಳೀಧರ್, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಮಹೇಶ್ವರಪ್ಪ ಇತರರು ಇದ್ದರು. ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ನಜ್ಮಾ ಕಾರ್ಯಕ್ರಮ ನಡೆಸಿಕೊಟ್ಟರು.

# ಲೋಕ ಅದಾಲತ್‌ನಲ್ಲಿ ಒಂದಾದ ದಂಪತಿ

## 2014ರಲ್ಲಿ ವಿವಾಹವಾಗಿ ಚಿಕ್ಕ ಸಮಸ್ಯೆಗೆ ದೂರವಾಗಿದ್ದ ಭವಾನಿ - ಮಧುಕುಮಾರ್

ದಾವಣಗೆರೆ, ಮಾ.12- ಕೌಟುಂಬಿಕ ಮನಸ್ತಾಪದಿಂದ ದೂರವಾಗಿದ್ದ ಪತಿಯು ಮತ್ತೆ ವೈವಾಹಿಕ ಜೀವನಕ್ಕೆ ಮುಂದಾದ ಅಪರೂಪದ ಪ್ರಕರಣ ಶನಿವಾರ ಇಲ್ಲಿನ ಜಿಲ್ಲಾ ಮತ್ತು ಕೌಟುಂಬಿಕ ನ್ಯಾಯಾಲಯದಲ್ಲಿನ ಲೋಕ್ ಅದಾಲತ್‌ನಲ್ಲಿ ನಡೆಯಿತು.



ಲೋಕ ಅದಾಲತ್‌ನಲ್ಲಿ ಒಂದಾದ ದಂಪತಿಗೆ ನ್ಯಾಯಾಧೀಶರು ಸಿಹಿ ವಿತರಿಸಿ, ಶುಭ ಹಾರೈಸಿದರು.

ಚಿಕ್ಕ ವಿಷಯಕ್ಕೆ ಮನಸ್ತಾಪದಿಂದ ದೂರವಾಗಿದ್ದ ಮಧುಕುಮಾರ್ ಮತ್ತು ಭವಾನಿ ದಂಪತಿ, ವಿಚ್ಛೇದನಕ್ಕಾಗಿ ನ್ಯಾಯಾಲಯದ ಮೊರೆ ಹೋಗಿದ್ದರು.

ಶಿವಮೊಗ್ಗದ ಮಧುಕುಮಾರ್, ದಾವಣಗೆರೆಯ ಭವಾನಿ, 2014ರಲ್ಲಿ ವೈವಾಹಿಕ ಜೀವನಕ್ಕೆ ಕಾಲಿರಿಸಿದ್ದರು. ಇಬ್ಬರೂ ಬಿಇ ಸಿವಿಲ್ ಪದವೀಧರರು. ಮಧುಕುಮಾರ್ ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೆ, ಭವಾನಿ ಇಂಜಿನಿಯರಿಂಗ್ ಪದವಿ ಪಡೆದು ಗೃಹಿಣಿಯಾಗಿದ್ದರು.

ಮದುವೆ ಆಗಿ ಕೇವಲ ಮೂರು ತಿಂಗಳಿನಲ್ಲಿ ಚಿಕ್ಕದೊಂದು ಸಮಸ್ಯೆಗೆ ಅವರ ವೈವಾಹಿಕ ಜೀವನದಲ್ಲಿ ಬಿರುಕು ಬಿಟ್ಟಿತು. ಈ ಮಧ್ಯೆ ಹಿರಿಯರ ಸಮ್ಮುಖದಲ್ಲಿ ರಾಜೀ ಸಂಧಾನವೂ ನಡೆದಿತ್ತಾದರೂ ವಿಫಲವಾಗಿತ್ತು. ಕೊನೆಗೆ ಭವಾನಿ ದಾವಣಗೆರೆಯ ತವರು ಮನೆಗೆ ವಾಪಸ್ಸಾದರು.

ಇದಾದ ಕೆಲವು ದಿನಗಳ ಬಳಿಕ ಅಂದರೆ 2016ರಲ್ಲಿ ಭವಾನಿ ಅವರು ನ್ಯಾಯಾಲಯದ ಮೊರೆ ಹೋಗಿ ತನ್ನ ಪತಿ ವಿರುದ್ಧ ವರದಕ್ಷಿಣೆ, ಕಿರುಕುಳ, ಕ್ರಿಮಿನಲ್, ಜೀವನಾಂಶ ಸೇರಿ ನಾಲ್ಕು ಪ್ರಕರಣ ದಾಖಲಿಸಿದರು. ಹೀಗೆ ಅಲ್ಲಿಂದ ಶುರುವಾದ ವಿಚ್ಛೇದನ ಪ್ರಕರಣ ಇಂದು ಜಿಲ್ಲಾ ಮತ್ತು ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಬಿ. ದಶರಥ, ನ್ಯಾಯವಾದಿಗಳಾದ ಕೆ.ಎಸ್. ರೇಖಾ ಅವರ ರಾಜೀ ಸಂಧಾನದಿಂದಾಗಿ ಮತ್ತೆ ವೈವಾಹಿಕ ಜೀವನಕ್ಕೆ ಮುಂದಾಗಿದ್ದಾರೆ.

ಈ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ ಭವಾನಿ, ಅರ್ಥ ಮಾಡಿಕೊಂಡು ಜೀವನ ನಡೆಸಿದ್ದರೆ, ನಾವು ಏಳು ವರ್ಷದಿಂದ ದೂರ ಇರುವ ಪ್ರಸಂಗವೇ ಬರುತ್ತಿರಲಿಲ್ಲ. ಈ ಏಳು ವರ್ಷದ ನಡುವೆ ನಾವು ಅನುಭವಿಸಿರುವ ಯಾತನೆ ಯಾರಿಗೂ ಬರಬಾರದು. ಪ್ರತಿಯೊಬ್ಬ ಗಂಡ-ಹೆಂಡತಿ ಪರಸ್ಪರ ಅರ್ಥ ಮಾಡಿಕೊಂಡು ಜೀವನ ನಡೆಸಿದರೆ ಬಾಳು ಸ್ವರ್ಗ ಸುಖ, ಇಲ್ಲದಿದ್ದರೆ ನರಕ ಎಂದರು.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ರಾದ ರಾಜೇಶ್ವರಿ ಹೆಗಡೆ ಮಾತನಾಡಿ, ಸಣ್ಣದೊಂದು ಸಮಸ್ಯೆಗೆ ಕಳೆದ ಏಳು ವರ್ಷಗಳಿನಿಂದ ಈ ದಂಪತಿ ಪರಸ್ಪರ ದೂರ ಇದ್ದರು. ಚಿಕ್ಕ ಸಮಸ್ಯೆಗಾಗಿ ಕೋರ್ಟ್ ಮೆಟ್ಟಿಲೇರಿ ಹಣ, ಸಮಯ ಹಾಳು ಮಾಡಿಕೊಂಡು, ಅವರು ನರಳಾಡಿದ ಯಾತನೆ ಪ್ರತಿ ದಂಪತಿಗಳಿಗೆ ಪಾಠವಾಗ ಬೇಕು. ಇಬ್ಬರು ಪರಸ್ಪರ ಅರ್ಥ ಮಾಡಿಕೊಂಡು ಬದುಕು ನಡೆಸಿದರೆ ಜೀವನ ನೆಮ್ಮದಿಯಾಗಿರುತ್ತದೆ ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ದಶರಥ, ಕಾನೂನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ನ್ಯಾಯಾಧೀಶರಾದ ಪ್ರವೀಣ್ ನಾಯಕ್, ನ್ಯಾಯವಾದಿ ಕೆ.ಎಸ್.ರೇಖಾ ಇನ್ನಿತರರಿದ್ದರು.

## 21ರಿಂದ ನೌಕರರ ಕ್ರೀಡಾಕೂಟ

ದಾವಣಗೆರೆ, ಮಾ. 12- ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಇದೇ ದಿನಾಂಕ 21 ಮತ್ತು 22 ರಂದು ಜಿಲ್ಲಾ ಕ್ರೀಡಾಂಗಣ ಮತ್ತು ಇತರೆಡೆ ನಡೆಯಲಿದೆ ಎಂದು ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಬಿ. ಪಾಲಾಕ್ಷಿ ತಿಳಿಸಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸರ್ಕಾರಿ ನೌಕರರ ಸಂಘ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ನಡೆಯುವ ಕ್ರೀಡಾಕೂಟದಲ್ಲಿ 300ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಲಿದ್ದು, ಆಸಕ್ತರು ಇದೇ ದಿನಾಂಕ 15 ರ ಸಂಜೆ ಒಳಗಾಗಿ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಗಳಿಗೆ ಹೆಸರು ನೋಂದಾಯಿಸಬೇಕು ಎಂದರು. ಸಂಘದ ಗೌರವ ಅಧ್ಯಕ್ಷ ಡಾ. ಉಮೇಶ್, ಕಾರ್ಯದರ್ಶಿ ಗುರುಮೂರ್ತಿ, ಕಲ್ಲೇಶ್ವರಪ್ಪ, ಗ್ರೇಸಿ, ಬಾಷಾ ಸಾಬ್, ಪುನೀತ್ ಶಂಕರ್, ವಿಶ್ವನಾಥ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

## ನೆಪಮಾತ್ರಕ್ಕೆ ದುರ್ಗಾಂಬಿಕಾ ದೇವಿ ಜಾತ್ರೆಯ ಪೂರ್ವಭಾವಿ ಸಭೆ

ದಾವಣಗೆರೆ, ಮಾ. 12- ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಎಸ್ಪಿ ಕಚೇರಿಯಲ್ಲಿ ಮೊನ್ನೆ ಕರೆಯಲಾಗಿದ್ದ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆಯ ಪೂರ್ವಭಾವಿ ಸಭೆ (ಶಾಂತಿ ಸಭೆ) ನೆಪಮಾತ್ರಕ್ಕೆ ಕರೆದ ಸಭೆಯಾಗಿದ್ದು, ತರಾತುರಿಯಲ್ಲಿ ವಿವಿಧ ಸಮಾಜಗಳ ಮುಖಂಡರನ್ನು ಆಹ್ವಾನಿಸಿ, ಕೆಲವರಿಗೆ ಮಾತ್ರ ಮಾತನಾಡಲು ಅವಕಾಶ ನೀಡಿ, ಸಭೆ ಮುಕ್ತಾಯಗೊಳಿಸಲಾಯಿತು ಎಂದು ಕೆಪಿಸಿಸಿ ಎಸ್ಸಿ ವಿಭಾಗದ ಪ್ರಧಾನ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದವರೇ ಹೆಚ್ಚಾಗಿ ನಗರ ದೇವತೆ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸುತ್ತಾರೆ. ಆದರೆ ಇವರ ಕುಂದುಕೊರತೆಗಳನ್ನು ಆಲಿಸದೇ, ತರಾತುರಿಯಲ್ಲಿ ಸಭೆ ನಡೆಸಿದ್ದಾದರೂ ಏಕೆ? ಎಂದು ಪ್ರಶ್ನಿಸಿದ್ದಾರೆ. ಕೂಡಲೇ ಎಸ್ಸಿ, ಎಸ್ಟಿ, ಹಿಂದುಳಿದ ವರ್ಗದವರ ಕುಂದುಕೊರತೆ ಸಭೆ ನಡೆಸುವಂತೆ ಹನುಮಂತಪ್ಪ ಆಗ್ರಹಿಸಿದ್ದಾರೆ.

## ಎಟಿಎಂ ಬ್ಲಾಕ್ ಸಂದೇಶ ನೋಡಿ ನಂಬಿದ್ದಕ್ಕೆ 2.17 ಲಕ್ಷ ಖೋತ

ದಾವಣಗೆರೆ, ಮಾ.12- ನಿಮ್ಮ ಎಟಿಎಂ ಬ್ಲಾಕ್ ಆಗಿದೆ ಎಂಬ ಮೊಬೈಲ್ ಸಂದೇಶ ನೋಡಿದ ವ್ಯಕ್ತಿಯೊಬ್ಬರು ಸಂದೇಶ ಕಳಿಸಿದ ಸಂಖ್ಯೆಗೆ ಕರೆ ಮಾಡಿ 2.17 ಲಕ್ಷ ರೂ. ಕಳೆದುಕೊಂಡ ಘಟನೆ ನಡೆದಿದೆ.

ನಗರದ ಶಿವಪಾರ್ವತಿ ಬಡಾವಣೆಯ ನಿವೃತ್ತ ನೌಕರ ಎಂ.ಜಿ. ಬಕ್ಕಪ್ಪನವರ ಮೊಬೈಲ್‌ಗೆ ಸಂದೇಶ ಬಂದಿದ್ದು, ಸಂದೇಶ ಕಳುಹಿಸಿದ ವ್ಯಕ್ತಿಗೆ ಕರೆ ಮಾಡಿದಾಗ ಅವರು, ಕೆವೈಸಿ ಅಪ್‌ಡೇಟ್ ಮಾಡುವುದಾಗಿ ಹೇಳಿ ಒಟಿಪಿ ಪಡೆದು ವಂಚಿಸಿದ್ದಾನೆ.

ಬ್ಯಾಂಕಿಗೆ ಹೋಗಿ ಖಾತೆ ಪರಿಶೀಲಿಸಿದಾಗ ವಂಚನೆಗೊಳಾಗಿರುವುದಾಗಿ ತಿಳಿದ ವ್ಯಕ್ತಿ ಇದೀಗ ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

## ಹಂಪನೂರಿನಲ್ಲಿ ಇಂದು ಲಕ್ಷ್ಮಿರಂಗನಾಥ ಸ್ವಾಮಿ ತೇರು

ಚಿತ್ರದುರ್ಗ ತಾಲ್ಲೂಕು ಭರಮಸಾಗರ ಹೋಬಳಿ ಹಂಪನೂರು ಗ್ರಾಮದಲ್ಲಿ ಇಂದು ಪುನರ್ವಸು ನಕ್ಷತ್ರದ ವೇಳೆ ರಥೋತ್ಸವ ಜರುಗಲಿದೆ. ಇಂದು ಬೆಳಗಿನ ಜಾವ 4 ಗಂಟೆಗೆ ಓಕುಳಿ, ನಂತರ ರಥೋತ್ಸವ ಜರುಗಲಿದೆ.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರುಗಳಾದ ಶ್ರೀಮತಿ ಜೆ.ಆರ್. ನಂದಿನಿ ಕೋಂ ರವೀಂದ್ರ, ಜೆ.ಸಿ. ಮತ್ತು ಚನ್ನಬಸವರಾಜು ಬಿನ್ ರವೀಂದ್ರ, ಜೆ.ಸಿ. ರವರು ನೀಡಿದ ಮಾಹಿತಿ ಹಾಗೂ ದಾವಣಗೆರೆ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಧ್ಯಂತರ ಅರ್ಜಿ 1ರ ಮೇಲಿನ 9.3.2022ರಂದು ತಾತ್ಕಾಲಿಕ ನಿರೋಧಾಜ್ಞೆ ಆದೇಶ ನೀಡಿದ ಅನ್ವಯ ಷೆಡ್ಯೂಲ್‌ನಲ್ಲಿ ತೋರಿಸಿರುವ ಆಸ್ತಿಗಳಿಗೆ ದಾವಣಗೆರೆ ಬಂಬೂ ಬಜಾರ್‌ನಲ್ಲಿ ವಾಸವಿರುವ ವಿಜಯಮ್ಮ ಅಲಿಯಾಸ್ ವಿಜಯ, ಟಿ.ಸಿ. ವಜ್ರೇಶ್ವರಿ ಹಾಗೂ ಹುಬ್ಬಳ್ಳಿಯ ಸುಮಂಗಲ ಮತ್ತು ಅವರ ಕಡೆ ಯಾರೇ ಆಗಲಿ ಗುಂಡಾಗಳಾಗಲೀ ಪ್ರವೇಶ ಮಾಡಿ, ತೊಂದರೆ ಮಾಡದಂತೆ ಆದೇಶ ನೀಡಿದ್ದು, ಯಾರೂ ಕೂಡ ಮೇಲಿನ ಆದೇಶ ಉಲ್ಲಂಘಿಸಿದಲ್ಲಿ, ಉಲ್ಲಂಘಿಸಿದವರನ್ನು 3 ತಿಂಗಳು ಸಜಾ ಮತ್ತು ಅವರ ಸ್ವಂತ ಆಸ್ತಿ ಜಪ್ತಿ ಮಾಡಿಸಬೇಕಾಗುತ್ತದೆ. ಕಾರಣ ಯಾರೂ ಕೂಡ ಮೇಲಿನ ಆದೇಶ ಉಲ್ಲಂಘಿಸಬಾರದಾಗಿ ಸಾರ್ವಜನಿಕರಲ್ಲಿ ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್-ಎ**

ದಾವಣಗೆರೆ ಎನ್, ರಸ್ತೆ, ಗಣೇಶ ದೇವಸ್ಥಾನದ ಹಿಂಭಾಗದ ಅಂಗಡಿ ಮಳಿಗೆ ಡೋರ್ ನಂ.689/1

**ಷೆಡ್ಯೂಲ್-ಬಿ**

ದಾವಣಗೆರೆ ಎನ್, ರಸ್ತೆ, ಗಣೇಶ ದೇವಸ್ಥಾನದ ಹಿಂಭಾಗದ ಅಂಗಡಿ ಮಳಿಗೆ ಡೋರ್ ನಂ.689/2

**ಷೆಡ್ಯೂಲ್-ಸಿ**

ದಾವಣಗೆರೆ ಎನ್, ರಸ್ತೆ, ಗಣೇಶ ದೇವಸ್ಥಾನದ ಹಿಂಭಾಗದ ಅಂಗಡಿ ಮಳಿಗೆ ಡೋರ್ ನಂ.689/3,

**(1) ಜೆ.ಆರ್. ನಂದಿನಿ**
**(2) ಚನ್ನಬಸವರಾಜು**

**ಡಾ. ರೇವಣ್ಣ ಬಳ್ಳಾರಿ,**
ಹಿರಿಯ ನ್ಯಾಯವಾದಿ
421, ವಾಲಿ ಬಿಲ್ಡಿಂಗ್, ಲಾಯರ್ ರಸ್ತೆ, ಕುವೆಂಪು ರಸ್ತೆ,
ಕೆ.ಬಿ. ಬಡಾವಣೆ, ದಾವಣಗೆರೆ-577002
**ಮೊ.ನಂ. 94483 39322, 96323 22652**

## PUBLIC NOTICE

It is here by notified to the general public that a partition suit is pending in OS 30/21 on the files of principal Senior Civil Judge Davangere for partition of the shares of the undersigned against our Brother Madhukar S.R.

Any body dealing with him for the sale, mortgage or agreement to sale etc., are doing so at their Own risk

**SCHEDULE**

**Converted Lands in :**

1) Re. sy. No. 79/6 measuring 3 acres.
2) Re. sy. No. 79/12 measuring 4.23 acres
3) Re. sy.No. 89/1 measuring 1.19 acres

Situated in Tholahunse (ತೋಳಹುಣಸೆ) Anagodu hobli, Davangere taluk, Including sites formed in the above schedule under V.P. Limits ot tholahunse (ತೋಳಹುಣಸೆ), Village panchayath limits.

**Place : Davangere.**
**Date : 10.03.2022**

**Sd/- S. Abdur Rahim,** Advocate
# 706/1, 10th cross
K.B. Extn., Davangere-2.
Ph. : 94496 49635

**Sd/- Dr. Ratnakar S.R.**
Prasad Rajanahalli
**Jayashree A.R. & Others**



# ತುರ್ಚಘಟ್ಟ ಗ್ರಾಮದ ಎಸ್.ಸಿ ಕಾಲೋನಿಯಿಂದ ತೋಳಹುಣಸೆ ಕೂಡುವ ರಸ್ತೆ ಕಾಮಗಾರಿ ಭೂಮಿ ಪೂಜೆ



ದಿನಾಂಕ 13.03.2022ರ ಭಾನುವಾರದಂದು
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ ವತಿಯಿಂದ
ಎಸ್.ಸಿ.ಪಿ ಯೋಜನೆಯಡಿ ಮಂಜೂರಾಗಿರುವ
ಕಾಮಗಾರಿಯ ಭೂಮಿ ಪೂಜೆ ಸಮಾರಂಭ
ಸ್ಥಳ: ಶ್ರೀ ಕಲ್ಲೇಶ್ವರ ದೇವಸ್ಥಾನದ
ಹತ್ತಿರ, ತುರ್ಚಘಟ್ಟ
ಸಮಯ: 12.30 ಗಂಟೆಗೆ



| ಕಾಮಗಾರಿಯ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|
| ದಾವಣಗೆರೆ ತಾ॥ ತುರ್ಚಘಟ್ಟ ಗ್ರಾಮದ ಎಸ್.ಸಿ ಕಾಲೋನಿಯಿಂದ ತೋಳಹುಣಸೆಗೆ ಕೂಡುವ ರಸ್ತೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ | ರೂ.180.00 |

ಈ ಕಾಮಗಾರಿ
ಭೂಮಿ ಪೂಜೆಗೆ ಆಗಮಿಸುತ್ತಿರುವ
ಸನ್ಮಾನ್ಯ **ಡಾ॥ ಶಾಮನೂರು ಶಿವಶಂಕರಪ್ಪ** ಅವರಿಗೂ,
ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಮಾಜಿ ಸದಸ್ಯರುಗಳು, ಗ್ರಾಮ ಪಂಚಾಯ್ತಿ
ಹಾಲಿ ಮತ್ತು ಮಾಜಿ ಸದಸ್ಯರುಗಳು, ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರುಗಳಿಗೆ,
ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ ಹೃದಯ ಪೂರ್ವಕ ಸ್ವಾಗತ ಸುಸ್ವಾಗತ.

# ಬಿಐಇಟಿಗೆ 14 ರ್‍ಯಾಂಕ್, 2 ಚಿನ್ನದ ಪದಕ

ದಾವಣಗೆರೆ, ಮಾ. 12- ನಗರದ ಬಿಐಇಟಿ ಕಾಲೇಜಿನ ವಿದ್ಯಾರ್ಥಿಗಳು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ನಡೆಸಿದ 2020-21 ನೇ ವರ್ಷದ ಪರೀಕ್ಷೆಗಳಲ್ಲಿ 14 ರ್‍ಯಾಂಕ್‌ಗಳನ್ನು ಗಳಿಸುವ ಮೂಲಕ ಕಾಲೇಜಿನ ಹಿರಿಮೆಯನ್ನು ಹೆಚ್ಚಿಸಿದ್ದಾರೆ ಎಂದು ಪ್ರಾಚಾರ್ಯ ಡಾ. ಹೆಚ್.ಬಿ. ಅರವಿಂದ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜವಳಿ ವಿಭಾಗದಲ್ಲಿ ಜಮೀರ್ ಅಸ್ಲಂ ಬಾರ್ಗೀರ್ ಪ್ರಥಮ, ಹಿತೇಶ್ ದಾಸ್ 2 ನೇ ರ್‍ಯಾಂಕ್, ಎಶ್ರಾಜ್ ಪಾಟೀಲ್ ಕೆಮಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ, ಎಸ್. ಚೈತ್ರಾ ಜವಳಿ ವಿಭಾಗದಲ್ಲಿ 3 ನೇ ರ್‍ಯಾಂಕ್ ಪಡೆದಿದ್ದಾರೆ.

ಜವಳಿ ವಿಭಾಗದಲ್ಲಿ ಪಿ. ಪ್ರಮೋದ್, ಎನ್.ಬಿ. ಅಕ್ಷತಾ, ಹೆಚ್.ಕೆ. ರಂಜಿತಾ, ಜಿ. ಪ್ರಗತಿ ಇವರು ಕ್ರಮವಾಗಿ 5,6,7 ಮತ್ತು 10 ನೇ ರ್‍ಯಾಂಕ್ ಪಡೆದಿದ್ದಾರೆ.

ಎಂ.ಟೆಕ್. ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ಕೆ. ಸುಚಿತ್ರಾ ಪ್ರಥಮ ರ್‍ಯಾಂಕ್, ಬಿ. ಮೋಹನ್ ರಾಜ್, ಹೆಚ್.ಎನ್. ಉಮೇಶ್ 3 ಮತ್ತು 5 ನೇ ರ್‍ಯಾಂಕ್ ಗಳಿಸಿದ್ದಾರೆ.

ಎಂ.ಟೆಕ್. ಸ್ಟ್ರಕ್ಚರ್ ವಿಭಾಗದಲ್ಲಿ ಕೆ.ವಿ. ಭೂಮಿಕ ಮತ್ತು ಮೊಹಮ್ಮದ್ ಮನ್ನಾನ್ ಕ್ರಮವಾಗಿ 6 ಮತ್ತು 10 ನೇ ರ್‍ಯಾಂಕ್, ಎಂಬಿಎ ನಲ್ಲಿ ಆರ್.ಕೆ. ಸ್ವಾತಿ 9 ನೇ ರ್‍ಯಾಂಕ್ ಪಡೆದಿದ್ದಾರೆ.

ಜವಳಿ ವಿಭಾಗದಲ್ಲಿ ಜಮೀರ್ ಅಸ್ಲಾಂ ಬಾರ್ಗೀರ್ ಮತ್ತು ಎಂ.ಟೆಕ್. ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ವಿಶ್ವವಿದ್ಯಾಲಯದ ಬಂಗಾರದ ಪದಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದು, ಕಾಲೇಜು ರಾಜ್ಯಕ್ಕೆ 5 ನೇ ಸ್ಥಾನದಲ್ಲಿದೆ ಎಂದು ಅರವಿಂದ್ ಮಾಹಿತಿ ನೀಡಿದರು.

**ಕೊಳಚೆ ನೀರಿನಿಂದ ದ್ರವ ರೂಪದ ನ್ಯಾನೋ ಗೊಬ್ಬರ:** ಬಿಐಇಟಿ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಕೊಳಚೆ ನೀರನ್ನು ಸಾವಯವ ಲಿಕ್ವಿಡ್ ನ್ಯಾನೋ ಗೊಬ್ಬರವನ್ನಾಗಿ ಪರಿವರ್ತಿಸಲು ಕಡಿಮೆ ವೆಚ್ಚದ ಸಾಧನವನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ಶುದ್ಧ ಪರಿಸರ ಮತ್ತು ಉತ್ತಮ ಕೃಷಿ ಉತ್ಪನ್ನಗಳನ್ನು ಹೊಂದಿರುವ ಎರಡು ಪ್ರಯೋಜನಗಳನ್ನು ಹೊಂದಿದೆ. ಇದು ನಾಗರಿಕರ ಉತ್ತಮ ಆರೋಗ್ಯಕ್ಕೆ ಕಾರಣವಾಗಿದೆ ಎಂದು ಡಾ. ಅರವಿಂದ್ ವಿದ್ಯಾರ್ಥಿಗಳ ಸಾಧನೆ ತಿಳಿಸಿದರು.

**ಹೈಬ್ರಿಡ್ ವಾಹನಗಳಲ್ಲಿ ಸೌರ ಶಕ್ತಿ ಬಳಕೆ:** ಹೆಚ್ಚುತ್ತಿರುವ ಇಂಧನ ಬೆಲೆ, ವಾಯುಮಾಲಿನ್ಯ. ಇಂಧನ ಉಳಿತಾಯದ ಅಗತ್ಯಗಳಂತಹ ಸಮಸ್ಯೆಗಳಿಗೆ ಸೌರ ಶಕ್ತಿ ಪರಿಹಾರವಾಗಿದೆ. ವಿದ್ಯುತ್ ಚಾಲಿತ ಮತ್ತು ಹೈಬ್ರಿಡ್ ವಾಹನಗಳಲ್ಲಿ ಸೌರಶಕ್ತಿಯ ಬಳಕೆ ಕಾರ್ಯಸಾಧ್ಯವಾದ ವಿಧಾನವಾಗಿದೆ ಎಂದು ಡಾ.ಎ.ಜಿ. ಶಂಕರಮೂರ್ತಿ ತಿಳಿಸಿದರು.

**5 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ಪ್ರಯೋಗಾಲಯ:** ಬಿಐಇಟಿ ಕಾಲೇಜಿನಲ್ಲಿ ಮತ್ತೊಂದು ಹೈಟೆಕ್ ಪ್ರಯೋಗಾಲಯವನ್ನು 5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು ಎಂದು ಹೇಳಿದರು.

**ಮಾ. 14 ರಂದು ವಿಶ್ವ ಮಹಿಳಾ ದಿನಾಚರಣೆ:** ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದದಿಂದ ಮಾ. 14 ರಂದು ಬೆಳಿಗ್ಗೆ 10.30 ಕ್ಕೆ ಕಾಲೇಜಿನ ಎಸ್.ಎಸ್. ಎಂ. ಸಾಂಸ್ಕೃತಿಕ ಕೇಂದ್ರದಲ್ಲಿ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಹಿಳಾ ವಿಭಾಗದ ಡೀನ್ ಪ್ರೊ. ಎಂ.ಇ. ಆಶಾಲತಾ ಮಾಹಿತಿ ನೀಡಿದರು.

ಇಸ್ರೋ ವಿಜ್ಞಾನಿ ಡಾ. ಟಿ.ಕೆ. ಅನುರಾಧ, ಬಾಪೂಜಿ ವಿದ್ಯಾಸಂಸ್ಥೆ ಗೌರ್ನಿಂಗ್ ಕೌನ್ಸಿಲ್ ಸದಸ್ಯರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ವಿಟಿಯು ರಿಜಿಸ್ಟ್ರಾರ್ (ಇವ್ಯಾಲ್ಯೂವೇಶನ್) ಡಾ. ಬಿ.ಇ. ರಂಗಸ್ವಾಮಿ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

## ಪಾದಯಾತ್ರೆ ನೆನಪಿಗಾಗಿ ಬಿಜೆಪಿ ಕಚೇರಿವರೆಗೆ ನಡಿಗೆ

# ಉತ್ತರ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿಯಾಗಿ 'ಜೆಪಿ' ಮನವಿ




ದಾವಣಗೆರೆ, ಮಾ.12- ಬಹುಮುಖ ಪ್ರತಿಭೆ, ಜೆಪಿ ಎಂದೇ ಹೆಸರಾಗಿರುವ ಕೊಂಡಜ್ಜಿ ಜಯಪ್ರಕಾಶ್ ಅವರ 'ಶಿಕ್ಷಣ ಮತ್ತು ಉದ್ಯೋಗ' ಮೂಲ ಧ್ಯೇಯವನ್ನಿಟ್ಟುಕೊಂಡು ಹುಟ್ಟೂರು ಕೊಂಡಜ್ಜಿಯಿಂದ ಬೆಂಗಳೂರು ವರೆಗೆ ನಡೆಸಿದ ಪಾದಯಾತ್ರೆಗೆ ಇಂದಿಗೆ 20 ವರ್ಷಗಳು ಸಂದಿವೆ. ಇದರ ಸವಿ ನೆನಪಿಗಾಗಿ ಇಂದು ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಿಂದ ಕೆ.ಬಿ. ಬಡಾವಣೆಯ ಬಿಜೆಪಿ ಜಿಲ್ಲಾ ಕಚೇರಿಯವರೆಗೆ ಅಭಿಮಾನಿಗಳೊಂದಿಗೆ ನಡಿಗೆ ಹಮ್ಮಿಕೊಳ್ಳಲಾಗಿತ್ತು.

ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿರುವ ವಿನಾಯಕ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ನಡಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ನಂತರ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅನೇಕ ಚಳವಳಿಗಳ ಮೂಲಕ ರಾಜಕೀಯ ರಂಗ ಪ್ರವೇಶ ಮಾಡಿರುವ ನಾನು, ಬಿಜೆಪಿಯಿಂದ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಆಕಾಂಕ್ಷಿಯಾಗಿ ಪಕ್ಷದ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಅವರಿಗೆ ಪಾದಯಾತ್ರೆ ಮೂಲಕ ಕಚೇರಿಗೆ ತೆರಳಿ ಸ್ಪರ್ಧಿಸಲು ಅವಕಾಶ ನೀಡುವಂತೆ ಮನವಿ ಸಲ್ಲಿಸಿರುವುದಾಗಿ ತಿಳಿಸಿದರು.

ಹಾಲಿ ಶಾಸಕ ಎಸ್.ಎ. ರವೀಂದ್ರನಾಥ್ ಅವರು ಈ ಬಾರಿ ಸ್ಪರ್ಧಿಸುವುದಿಲ್ಲ ಎಂಬ ಸೂಚನೆ ತಿಳಿದು ಬಂದಿದ್ದು ಮತ್ತು ಅವರು ಸ್ಪರ್ಧಿಸುವುದಿಲ್ಲ ಎಂಬುದು ಖಾತ್ರಿಯಾದರೆ, ನನಗೆ ಅವಕಾಶ ನೀಡಿ ಎಂದು ಮನವಿ ಮಾಡಿದ್ದೇನೆ. ಪಕ್ಷ ನನ್ನ ಹೋರಾಟಗಳು, ನನ್ನೊಂದಿಗಿರುವ ವಿದ್ಯಾರ್ಥಿ ಪಡೆಯ ಸಂಬಂಧ, ಪಕ್ಷ ನಿಷ್ಠೆ ಗಮನಿಸಿ ವರಿಷ್ಠರು ತಮ್ಮನ್ನು ಪರಿಗಣಿಸಲಿದ್ದಾರೆಂಬ ವಿಶ್ವಾಸ ತಮ್ಮದಾಗಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಯುವ ಮುಖಂಡರಾದ ಪಿ.ಸಿ. ಶ್ರೀನಿವಾಸ್, ಶಂಕರಗೌಡ ಬಿರಾದಾರ್, ಬಸವರಾಜಯ್ಯ ಎಸ್.ಎಂ., ಮಲ್ಲಿಕಾರ್ಜುನ್, ರಾಕೇಶ್, ಪಿ.ಜಿ. ಶಿವಪ್ರಕಾಶ್, ಮಹೇಶ್ ಶೆಟ್ಟಿ ಮತ್ತಿತರರು ಪಾಲ್ಗೊಂಡಿದ್ದರು.

## ರೈತರು ಕಂದಾಯ ದಾಖಲೆಗಳನ್ನು ಹೊಂದುವುದು ಅವರ ಹಕ್ಕು : ಹರಪನಹಳ್ಳಿ ತಹಶೀಲ್ದಾರ್ ಪ್ರಭಾಕರ್



ಹರಪನಹಳ್ಳಿ, ಮಾ.12- ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಕಂದಾಯ ದಾಖಲೆ ಮನೆ ಬಾಗಿಲಿಗೆ' ಎಂಬ ಯೋಜನೆಯಡಿ ತಾಲ್ಲೂಕಿನ ಬಾಗಳಿ. ಕೋಡಿಹಳ್ಳಿ ಗ್ರಾಮಗಳಿಗೆ ತಹಶೀಲ್ದಾರ್ ಪ್ರಭಾಕರ್ ಎಸ್.ಹಾಗೂ ಕಂದಾಯ ಅಧಿಕಾರಿಗಳು ಮನೆ ಬಾಗಿಲಿಗೆ ತೆರಳಿ ಕಂದಾಯ ದಾಖಲೆಗಳನ್ನು ವಿತರಿಸಿದರು.

ಈ ವೇಳೆ ತಹಶೀಲ್ದಾರ್ ಪ್ರಭಾಕರ್ ಎಸ್ ಮಾತನಾಡಿ, ರೈತರು ತಮ್ಮ ಕಂದಾಯ ದಾಖಲೆಗಳನ್ನು ಹೊಂದುವುದು ಅವರ ಹಕ್ಕಾಗಿದ್ದು. ತಮ್ಮ ದಿನ ನಿತ್ಯದ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ದಾಖಲೆಗಳ ಅವಶ್ಯಕತೆ ಇದ್ದು ಇಂತಹ ದಾಖಲೆಗಳಿಗೆ ಗ್ರಾಮೀಣ ಭಾಗದಿಂದ ರೈತರು ದಿನನಿತ್ಯ ತಾಲ್ಲೂಕು ಕಚೇರಿಗಳಿಗೆ ಅಲೆದಾಡವುದು ಕಷ್ಟವಾಗಿದ್ದರಿಂದ, ರೈತರಿಗೆ ಅವರ ಮನೆ ಬಾಗಿಲುಗಳಿಗೆ ಅವರ ಕಂದಾಯ ದಾಖಲೆ ತಲುಪಿಸುವುದರಿಂದ ಅಲೆದಾಟ ತಪ್ಪಿಸಿದಂತಾಗುತ್ತದೆ ಎಂದ ಅವರು, ಮುಂದಿನ ದಿನಗಳಲ್ಲಿ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೆ ತೆರಳಿ ರೈತರ ಮನೆ ಮನೆಗಳಿಗೆ ಕಂದಾಯ ದಾಖಲೆಗಳನ್ನು ತಲುಪಿಸಲಾಗುವುದು ಎಂದರು.

ಬಾಗಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಪೂಜಾರ್ ಹನುಮಂತಪ್ಪ, ಆರ್.ಐ. ಅರವಿಂದ, ವಿ.ಎ.ಶಶಿಕುಮಾರ. ಖೇಣಿ ಕೊಟ್ರೇಶ ಸೇರಿದಂತೆ ಇತರರು ಇದ್ದರು.

## ಪತ್ರಕರ್ತರಂತೆ ನಟಿಸಿ ಹಣ ದೋಚಲು ಯತ್ನ : ಸೆರೆ



ಹರಿಹರ, ಮಾ.12- ಪತ್ರಕರ್ತರಂತೆ ನಟಿಸಿ ಹಣ ವಸೂಲಿ ಮಾಡಲು ಯತ್ನಿಸಿದ ಆರೋಪದಲ್ಲಿ ನಾಲ್ವರನ್ನು ಬಂಧಿಸಲಾಗಿದೆ.

ಕೊಂಡಜ್ಜಿ ಗ್ರಾಮದ ಗಿರೀಶ್ ಎಂಬುವವರು ನಿನ್ನೆ ಬೆಳಿಗ್ಗೆ ಬೇರೆ ಜಮೀನನ್ನು ಮಟ್ಟ ಮಾಡಲು ಹೊಲದಲ್ಲಿ ಮಣ್ಣನ್ನು ತುಂಬುವಾಗ ಕನ್ನಡ ಪರ ಸಂಘಟನೆ ಅಧ್ಯಕ್ಷ ನಾಗೇನಹಳ್ಳಿ ರಾಘವೇಂದ್ರ, ಪಬ್ಲಿಕ್ 24 ವರದಿಗಾರ ಅಣ್ಣಪ್ಪ, ತುಂಗಭದ್ರಾ ವರದಿಗಾರ ಸಂತೋಷ ಗುಡಿಮನಿ, ಕನಸಿನ ಭಾರತ ವರದಿಗಾರ ಪಕ್ಕೀರೇಶ್ ಯಾದವ್, ಕನ್ನಡಪ್ರಭ ಬರಹಗಾರ ಸಾಬ್ಜಾನ್ ಸಾಬ್ ಅವರುಗಳು ಗಿರೀಶ್ ಬಳಿ ಹೋಗಿ ನಾನು ಪಬ್ಲಿಕ್ ಟಿ.ವಿ. ವರದಿಗಾರರು ಎಂದು ಹೇಳಿ ನೀವು ಮಣ್ಣನ್ನು ತುಂಬುವುದಕ್ಕೆ ಪರವಾನಗಿ ಪಡೆದಿರುವುದಿಲ್ಲವೆಂದು ಬೆದರಿಕೆ ಹಾಕಿ ವರದಿ ಮಾಡದೆ ಇರೋದಕ್ಕೆ 50 ಸಾವಿರ ಕೊಡುವಂತೆ ಕೇಳಿ ದ್ದಾರೆ. ಇದರಿಂದ ಅನುಮಾನ ಗೊಂಡ ಗಿರೀಶ್ ದಾವಣಗೆರೆ ಜಿಲ್ಲಾ ಪಬ್ಲಿಕ್ ಟಿ.ವಿ. ವರದಿಗಾರ ಪುನೀತ್ ಕುಮಾರ್‌ರ ಗಮನಕ್ಕೆ ತಂದಿದ್ದಾರೆ. ಈ ಸಂಬಂಧ ಪುನೀತ್ ನೀಡಿದ ದೂರಿನನ್ವಯ ಗುತ್ತೂರು ಗ್ರಾಮಾಂತರ ಠಾಣೆ ಪೊಲೀಸರು ನಾಲ್ವರನ್ನು ಬಂಧಿಸಿದ್ದು, ಬಾಬ್ಜಾನ್ ಸಾಬ್ ಪತ್ತೆಗೆ ಮುಂದಾಗಿದ್ದಾರೆ.

ಪಿಎಸ್‌ಐ ವೀರಬಸಪ್ಪ ಕುಸಲಾಪುರ, ಎಎಸ್‌ಐ ರಾಮಚಂದ್ರ, ಸಿಬ್ಬಂದಿಗಳಾದ ಸೈಯದ್ ಗಫೂರ್, ದ್ವಾರಕೀಶ್, ರಮೇಶ್, ಹಜರತ್ ಆಲಿ, ಬಾಲರಾಜ್ ನಾಯ್ಕ್, ಸಿದ್ದಪ್ಪ, ನಿಂಗರಾಜ್, ಶಿವರಾಜ್ ಇತರರು ಹಾಜರಿದ್ದರು.

## ಕಂದಾಯ ದಾಖಲೆ ಮನೆ ಬಾಗಿಲಿಗೆ ಯೋಜನೆಗೆ ಜಗಳೂರಿನಲ್ಲಿ ಚಾಲನೆ



ಜಗಳೂರು, ಮಾ.12 - ಕಂದಾಯ ಇಲಾಖೆ ವತಿಯಿಂದ ಸಾರ್ವಜನಿಕರಿಗೆ ನೀಡುವ ಮೂಲ ದಾಖಲೆಗಳಾದ ಪಹಣಿ, ಅಟ್ಲಾಸ್, ಟಿಪ್ಪಣಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ರೈತರ ಮನೆ ಬಾಗಿಲಿಗೆ ಉಚಿತವಾಗಿ ತಲುಪಿಸಲು 'ಕಂದಾಯ ದಾಖಲೆ ಮನೆ ಬಾಗಿಲಿಗೆ' ಯೋಜನೆಗೆ ಚಾಲನೆ ನೀಡಲಾಗಿದ್ದು, ರೈತರು ಇದರ ಸದುಪಯೋಗ ಮಾಡಿಕೊಳ್ಳಬೇಕೆಂದು ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದರು.

ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ರೈತರಿಗೆ ಉಚಿತ ದಾಖಲೆಗಳನ್ನು ವಿತರಿಸಿ ಅವರು ಮಾತನಾಡಿದರು. ರೈತರು ಅನಾವಶ್ಯ ಕವಾಗಿ ಅಲೆದಾಡಬಾರದು ಎಂದು ಸರ್ಕಾರ ಜನರ ಮನೆ ಬಾಗಿಲಿಗೆ ದಾಖಲೆಗಳನ್ನು ತಲುಪಿಸುವ ಕಾರ್ಯಕ್ರಮ ಜಾರಿಗೆ ತರಲಾಗಿದೆ. ರೈತರು ದಾಖಲೆಗಳನ್ನು ಪರಿಶೀಲಿಸಿಕೊಂಡು ತಪ್ಪು ಇದ್ದರೆ ಸರಿಪಡಿಸಿಕೊಳ್ಳಬೇಕು ಎಂದರು.

ಪ್ರಾಸ್ತಾವಿಕ ಭಾಷಣ ಮಾಡಿದ ತಹಶೀಲ್ದಾರ್ ಜಿ. ಸಂತೋಷ್ ಕುಮಾರ್ ರೈತರ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ ಎಂದರು.

ತಾಲ್ಲೂಕಿನಲ್ಲಿ 32 ಸಾವಿರ ಪಹಣಿಗಳು, 33 ಸಾವಿರ ಅಟ್ಲಾಸ್ ಹಾಗೂ 41 ಸಾವಿರ ಪ.ಜಾತಿ/ಪ.ಪಂಗಡದ ಜಾತಿ, ಆದಾಯ ಪ್ರಮಾಣ ಪತ್ರಗಳನ್ನು ಗ್ರಾಮ ಲೆಕ್ಕಾಧಿಕಾರಿ ಜನರ ಮನೆ ಮನೆಗೆ ಭೇಟಿ ನೀಡಿ ದಾಖಲೆ ಗಳನ್ನು ವಿತರಿಸುವರು ಎಂದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಹೇಶ್, ನಿರೀಕ್ಷಕ ಕುಬೇರನಾಯ್ಕ್ ಮುಂತಾದವರು ಹಾಜರಿದ್ದರು.

## ಯಕ್ಕನಹಳ್ಳಿಯಲ್ಲಿ ನಾಳೆ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ

ಹೊನ್ನಾಳಿ ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ ನಾಳೆ ಸೋಮವಾರ ಬೆಳಗಿನ ಜಾವ ನಡೆಯಲಿದೆ ಎಂದು ಯಕ್ಕನಹಳ್ಳಿ ಗ್ರಾ.ಪಂ. ಅಧ್ಯಕ್ಷ ವೈ.ಕೆ.ದಯಾನಂದ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ ಉಚ್ಛಾಯ ಮಹೋತ್ಸವ ನಡೆಯಲಿದೆ. ಮಧ್ಯಾಹ್ನ 3 ರ ಸುಮಾರಿಗೆ ಕೂಲಂಬಿಯ ದುರ್ಗಮ್ಮ, ಕುಂದೂರಿನ ಶ್ರೀ ಆಂಜನೇಯ ಸ್ವಾಮಿ, ಯರೇಚಿಕ್ಕನಹಳ್ಳಿಯ ಶ್ರೀ ಬಸವೇಶ್ವರ ದೇವರುಗಳನ್ನು ಗ್ರಾಮಕ್ಕೆ ಬರಮಾಡಿಕೊಂಡು ಗದ್ದುಗೆಯಲ್ಲಿ ಪ್ರತಿಷ್ಠಾಪಿಸಲಾಗುವುದು.

## ನಗರದಲ್ಲಿ ಇಂದು - ನಾಳೆ ಅಮೃತ ರಂಗಮಹೋತ್ಸವ

ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ ಅಮೃತ ರಂಗ ಮಹೋತ್ಸವ ಕಾರ್ಯಕ್ರಮವು ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಇಂದು - ನಾಳೆ ನಡೆಯಲಿದೆ.

ಇಂದು ಸಂಜೆ 6.30 ಕ್ಕೆ ಲೇಖಕ ಬಾ.ಮ. ಬಸವರಾಜಯ್ಯ ಉದ್ಘಾಟಿಸಲಿದ್ದು, ಧ.ರಾ.ಮ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ರುದ್ರೇಶ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ನಾಟಕ ಅಕಾಡೆಮಿ ಸದಸ್ಯ ರವೀಂದ್ರ ಎಚ್. ಅರಳಗುಪ್ಪಿ ಉಪಸ್ಥಿತರಿರುವರು. ಹಕ್ಕಿ ಹಾರುತಿದೆ ನೋಡಿದಿರಾ ನಾಟಕ ಪ್ರದರ್ಶನಗೊಳ್ಳಲಿದೆ.

## ಎಂಬಿಎ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ

ದಾವಣಗೆರೆ, ಮಾ.12 - ನಗರದ ಅತ್ಯಾತಿ ಟೆಕ್ನಾಲಜೀಸ್ ಸಂಸ್ಥೆಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಬಾಪೂಜಿ ಎಂ.ಬಿ.ಎ. ಕಾಲೇಜಿನಲ್ಲಿ ನಾಡಿದ್ದು ದಿನಾಂಕ 14ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ವಿಶೇಷವಾಗಿ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣೆ ನಡೆಯಲಿದೆ.

## 12 ಮಕ್ಕಳು ಉಚಿತ ಶಸ್ತ್ರಚಿಕಿತ್ಸೆಗೆ ಆಯ್ಕೆ



ದಾವಣಗೆರೆ, ಮಾ.12 - ಡಾ|| ಶರಣ್ ಪಾಟೀಲ್ ನೇತೃತ್ವದ ಸ್ಪರ್ಶ ಹಾಸ್ಪಿಟಲ್ ರಾಜ್ಯದಲ್ಲಿ ಅಂಗವಿಕಲತೆ ಇರುವ ಮಕ್ಕಳಿಗೆ ಉಚಿತ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ನಡೆಸುವ 'ಸ್ಪರ್ಶ ವಚನ' ಎಂಬ ಅಭಿಯಾನವನ್ನು ಈಚೆಗೆ ಹಮ್ಮಿಕೊಂಡಿತ್ತು. ದಾವಣಗೆರೆ, ಚಿತ್ರದುರ್ಗ, ಹಾವೇರಿ ಜಿಲ್ಲೆಯ ಸುಮಾರು 40 ಮಕ್ಕಳು ನಗರದಲ್ಲಿ ನಡೆದ ಶಿಬಿರಕ್ಕೆ ತಪಾಸಣೆಗೆ ಹಾಜರಾಗಿದ್ದರು.

ಕೈ, ಪಾದ ವೈಕಲ್ಯತೆ, ಬೆನ್ನು ಹುರಿಯ ಸಮಸ್ಯೆ ಇರುವ ಮಕ್ಕಳನ್ನು ಜಿಲ್ಲೆಯಲ್ಲಿ ಡಾ|| ಸರಸ್ವತಿ ಅವರು ಪರಿಶೀಲಿಸಿದರು. 40 ಮಕ್ಕಳಲ್ಲಿ 12 ಮಕ್ಕಳನ್ನು ಉಚಿತ ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಿದ್ದು, ಅವರೆಲ್ಲರನ್ನೂ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ಬರಲು ಸೂಚಿಸಲಾಗಿದೆ ಎಂದು ತಿಳಿದು ಬಂದಿದೆ. ಸ್ಪರ್ಶ ಆಸ್ಪತ್ರೆ 'ಸ್ಪರ್ಶ ವಚನ'ದ ಮೂಲಕ ಈಗಾಗಲೇ ಶಿಕ್ಷಕರು, ಮಹಿಳೆಯರು ಮತ್ತಿತರೆ ವರ್ಗದವರಿಗೆ ಉಚಿತ ಶಸ್ತ್ರಚಿಕಿತ್ಸೆ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು.

## ನಗರದಲ್ಲಿ ಇಂದು ಮುದ್ರಣ ದಿನಾಚರಣೆ

ಮುದ್ರಣ ಜನಕ ಜೋಹಾನ್ಸ್ ಗುಟೆನ್‌ಬರ್ಗ್ ಅವರ 623ನೇ ಜನ್ಮ ದಿನದ ಅಂಗವಾಗಿ ಮುದ್ರಣ ದಿನಾಚರಣೆ ಕಾರ್ಯಕ್ರಮವು ಶಿವ - ಪಾರ್ವತಿ ಕಲ್ಯಾಣ ಮಂಟಪದಲ್ಲಿ ಇಂದು ನಡೆಯಲಿದೆ. ದಾವಣಗೆರೆ ಜಿಲ್ಲಾ ಮುದ್ರಣಕಾರರ ಸಂಘದ ವತಿಯಿಂದ ಏರ್ಪಾಡಾಗಿರುವ ಈ ಕಾರ್ಯಕ್ರಮದಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಮುದ್ರಣಕಾರರ ಕುಟುಂಬದವರಿಗಾಗಿ ಸ್ಪರ್ಧಾತ್ಮಕ ಮನರಂಜನಾ ಕ್ರೀಡೆಗಳು ಜರುಗಲಿವೆ. ನಂತರ ಮಧ್ಯಾಹ್ನ 2 ಗಂಟೆಗೆ ಮುದ್ರಣ ದಿನಾಚರಣೆಯ ಸಭಾ ಕಾರ್ಯಕ್ರಮ ನಡೆಯಲಿದ್ದು, ಸಮಾರಂಭದಲ್ಲಿ ಮುದ್ರಣ ಕ್ಷೇತ್ರದಲ್ಲಿ 25ಕ್ಕೂ ಹೆಚ್ಚು ವಸಂತಗಳನ್ನು ಪೂರೈಸಿದ ಮುದ್ರಣ ಮಾಲೀಕರುಗಳನ್ನು ಸನ್ಮಾನಿಸಿ, ಗೌರವಿಸಲಾಗುತ್ತದೆ.

## ತಾರೇಹಳ್ಳಿಯಲ್ಲಿ 16 ರಂದು ರಥೋತ್ಸವ

ಜಗಳೂರು ತಾಲ್ಲೂಕಿನ ತಾರೇಹಳ್ಳಿಯಲ್ಲಿ ಇದೇ ದಿನಾಂಕ 16 ರಂದು ಶ್ರೀ ರಂಗನಾಥಸ್ವಾಮಿ ರಥೋತ್ಸವ ಜರುಗುವುದು. ಇಂದು ಸರ್ಪ ವಾಹನ ಉತ್ಸವ, ದಿ. 14 ರ ಸೋಮವಾರ ಗಜ ವಾಹನ ಉತ್ಸವ, ದಿ. 15 ರ ಮಂಗಳವಾರ ಗರುಡ ವಾಹನ ಉತ್ಸವಗಳು ನಡೆಯಲಿವೆ.

# ಮುದ್ರಣ ಕ್ಷೇತ್ರದಲ್ಲಿ ಅನನ್ಯ ಸೇವೆ ಕೆ. ಚಂದ್ರಣ್ಣ ಅವರಿಗೆ ಇಂದು ಸನ್ಮಾನ



ದಾವಣಗೆರೆ,ಮಾ.12- ಜಿಲ್ಲಾ ಮುದ್ರಣಕಾರರ ಸಂಘವು ಮುದ್ರಣ ಕ್ಷೇತ್ರದ ಸಾಧಕರಿಗೆ ಪ್ರತಿ ವರ್ಷವೂ ಕೊಡಮಾಡುವ ಗೌರವ ಪುರಸ್ಕಾರಕ್ಕೆ ಜಿಲ್ಲೆಯ ಹಿರಿಯ ಮುದ್ರಣಕಾರರೂ, ಗಿರೀಶ್ ಪ್ರಿಂಟರ್ಸ್ ಮಾಲೀಕರೂ, ಪತ್ರಿಕೋದ್ಯಮಿಗಳೂ ಆದ ಕೆ. ಚಂದ್ರಣ್ಣ ಅವರು ಭಾಜನರಾಗಿದ್ದಾರೆ.

ಜಿಲ್ಲಾ ಮುದ್ರಣಕಾರರ ಸಂಘದ ವತಿಯಿಂದ ನಾಳೆ ದಿನಾಂಕ 13ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ನಗರದ ಶಿವ - ಪಾರ್ವತಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿರುವ 'ಮುದ್ರಣ ದಿನಾಚರಣೆ' ಕಾರ್ಯಕ್ರಮದಲ್ಲಿ ಚಂದ್ರಣ್ಣ ಅವರಿಗೆ ಈ ಗೌರವ ಪುರಸ್ಕಾರ ನೀಡಲಾಗುತ್ತದೆ.

**ಸಂಕ್ಷಿಪ್ತ ಪರಿಚಯ** : ರೈಲ್ವೆ ಇಲಾಖೆಯ ನಿವೃತ್ತ ಅಧಿಕಾರಿ ದಿ. ಡಿ. ಹೆಚ್. ಕೇಶವ ಮತ್ತು ದಿ. ಶ್ರೀಮತಿ ಕಮಲಮ್ಮ ದಂಪತಿಯ ಹಿರಿಯ ಪುತ್ರರಾದ ಕೆ. ಚಂದ್ರಣ್ಣ ಎಸ್ಸೆಸ್ಸೆಲ್ಸಿವರೆಗಿನ ವಿದ್ಯಾಭ್ಯಾಸದ ನಂತರ ಪ್ರಿಂಟಿಂಗ್ ಪ್ರೆಸ್ ಸ್ಥಾಪಿಸುವುದರ ಮೂಲಕ ಮುದ್ರಣ ಕ್ಷೇತ್ರದಲ್ಲಿ ತಮ್ಮ ಬದುಕನ್ನು ಕಂಡುಕೊಂಡರು.

ಸುಮಾರು 4 ದಶಕಗಳಿಂದ ಮುದ್ರಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವುದರ ಜೊತೆ - ಜೊತೆಗೆ 'ಕರ್ನಾಟಕ ಎಕ್ಸ್‌ಪ್ರೆಸ್' ವಾರ ಪತ್ರಿಕೆಯನ್ನು ಪ್ರಾರಂಭಿಸಿ, ಪತ್ರಿಕೋದ್ಯಮದಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ.

ವೃತ್ತಿ ಜೀವನದೊಂದಿಗೆ ಸಾಮಾಜಿಕ ಸೇವೆಯಲ್ಲೂ ತಮ್ಮನ್ನು ತಾವು ತೊಡಿಗಿಸಿಕೊಂಡರು. ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ. ದೇವೇಗೌಡ ಮತ್ತು ಮಾಜಿ ಸಚಿವರಾಗಿದ್ದ ಡಿ. ಮಂಜುನಾಥ್ ಅವರುಗಳ ನೇತೃತ್ವದ ಜನತಾ ದಳದಲ್ಲಿ ಗುರುತಿಸಿಕೊಂಡ ಅವರು, ಜಿಲ್ಲಾ ಜೆಡಿಎಸ್ ಕಾರ್ಯದರ್ಶಿಯಾಗುವುದರೊಂದಿಗೆ ಪಕ್ಷದ ಸಂಘಟನೆಯಲ್ಲಿ ಮುಂಚೂಣಿಯಲ್ಲಿದ್ದು, ಪಕ್ಷದ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿದ್ದುಕೊಂಡೇ ಎಲ್ಲಾ ಪಕ್ಷಗಳ ಮತ್ತು ಎಲ್ಲಾ ವರ್ಗಗಳ ಜನರೊಂದಿಗೆ ಬೆರೆತು ಪಕ್ಷಾತೀತ ಮತ್ತು ಜಾತ್ಯತೀತ ಮುಖಂಡ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.


ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಧರ್ಮದರ್ಶಿಯಾಗಿ, ಬಾಬು ಜಗಜೀವನರಾಂ ರಿಕ್ರಿಯೇಷನ್ ಮತ್ತು ವಿದ್ಯಾಸಂಸ್ಥೆ ಅಧ್ಯಕ್ಷರಾಗಿ, ಧಾರವಾಡದ ಚೇತನಾ ವಿದ್ಯಾಸಂಸ್ಥೆ ಅಧ್ಯಕ್ಷರಾಗಿ ದಾವಣಗೆರೆ ನಗರಾಭಿವೃದ್ಧಿ ಮಂಡಳಿ ಸದಸ್ಯರಾಗಿ, ದಾವಣಗೆರೆ ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಸಲಹಾ ಸಮಿತಿ ಸದಸ್ಯರಾಗಿ, ಗಾಂಜಿ ವೀರಪ್ಪನವರು ಸ್ಥಾಪಿಸಿದ್ದ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ನಿರ್ದೇಶಕರಾಗಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ನಿರ್ದೇಶಕರಾಗಿ, ಜನತಾ ಬಜಾರ್ ನಿರ್ದೇಶಕರಾಗಿ ಮತ್ತು ಹಲವಾರು ಸೇವಾ ಸಂಸ್ಥೆಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ ಮತ್ತು ಕಾರ್ಯ ನಿರ್ವಹಣೆಯನ್ನು ಮುಂದುವರೆಸಿದ್ದಾರೆ.

ಈ ಸಂಸ್ಥೆಗಳ ಮೂಲಕ ಮಾಡಿದ ಮತ್ತು ಮಾಡುತ್ತಿರುವ ಸಾಮಾಜಿಕ ಕಾರ್ಯಗಳಿಂದಾಗಿ ಹಾಗೂ ಅನ್ಯಾಯ, ಭ್ರಷ್ಟಾಚಾರಗಳ ವಿರುದ್ಧ ಪತ್ರಿಕೆ ಮತ್ತು ಹೋರಾಟಗಳ ಮೂಲಕ ಪ್ರತಿಭಟಿಸಿ, ಸಾರ್ವಜನಿಕರ ಆಸ್ತಿ - ಪಾಸ್ತಿಗಳನ್ನು ಉಳಿಸಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಪೇಪರ್ ಚಂದ್ರಣ್ಣ ಎಂದೇ ಹೆಸರಾಗಿದ್ದಾರೆ.

ಚಂದ್ರಣ್ಣರ ಸಾಮಾಜಿಕ ಸೇವೆಯನ್ನು ಪರಿಗಣಿಸಿ, ಜಿಲ್ಲಾಡಳಿತವು ಕರ್ನಾಟಕ ರಾಜ್ಯೋತ್ಸವದ ಗೌರವ, ಹಲವಾರು ಸಂಘ-ಸಂಸ್ಥೆಗಳು ಪ್ರಶಸ್ತಿ - ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಇದೀಗ, ಜಿಲ್ಲಾ ಮುದ್ರಣಕಾರರ ಸಂಘ ಸನ್ಮಾನಿಸಿ, ಗೌರವಿಸುತ್ತಿದೆ.


ST. PAUL'S CBSE SCHOOL
P.J Extension, DAVANAGERE.
TEACHERS WANTED
1) MA / BA, B.Ed - S.St. English
2) MA / BA, B.Ed - Kannada Major
3) M.Sc./B.Sc., B.Ed. - Maths & Physics, Chem. & Bio
APPLY WITHIN 05 DAYS
* Fluency in English is Mandaory
Ph. No. 9964377313, 9113083960



ಹುಟ್ಟುಹಬ್ಬದ ಶುಭಾಶಯಗಳು

ಇಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ಕಾಂಗ್ರೆಸ್ ಮುಖಂಡರು ಹಾಗೂ ಆತ್ಮೀಯರೂ ಆದ
ಶ್ರೀಯುತ ಇಟ್ಟಿಗುಡಿ ಮಂಜುನಾಥ್
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು
ಶುಭ ಕೋರುವವರು:
5ನೇ ವಾರ್ಡ್, ಎಸ್.ಪಿ.ಎಸ್. ನಗರ 1ನೇ ಹಂತ,
2ನೇ ಹಂತ, ಬಾಬು ಜಗಜೀವನ್ ನಗರ,
ರಾಜೀವ್ ಗಾಂಧಿ ಬಡಾವಣೆಯ ಸರ್ವ ನಾಗರಿಕರು




ಎಸ್.ಎಸ್.ಕೇರ್ ಟ್ರಸ್ಟ್
ನಮ್ಮ ನಡೆ ಆರೋಗ್ಯದೆಡೆ
ಕಿಡ್ನಿ ಕಾಯಿಲೆಗಳನ್ನು ತಡೆಗಟ್ಟಿ!

ಈ ವಿಶ್ವ ಕಿಡ್ನಿ ದಿನದಂದು,
ದಾವಣಗೆರೆಯ ಜೆ.ಜೆ.ಎಂ ಮೆಡಿಕಲ್ ಕಾಲೇಜ್ ಹಾಗೂ ಎಸ್.ಎಸ್.ಐ.ಎಂ.ಎಸ್ & ಆರ್.ಸಿ.ಯಲ್ಲಿ ಕಿಡ್ನಿ ಚಿಕಿತ್ಸೆ ಹಾಗೂ ಡಯಾಲಿಸಿಸ್ ಘಟಕವನ್ನು ಹೊಂದಿರುವ ಬಾಪೂಜಿ ಆಸ್ಪತ್ರೆಯಲ್ಲಿ ಮತ್ತು ಎಸ್.ಎಸ್. ಹೈಟೆಕ್ ಆಸ್ಪತ್ರೆಯಲ್ಲಿ ಅನುಭವಿ ಮೂತ್ರಪಿಂಡ ಶಾಸ್ತ್ರಜ್ಞರಿಂದ ಉಚಿತ ಚಿಕಿತ್ಸೆ ಹಾಗೂ ಸಮಾಲೋಚನೆ ಪಡೆಯಿರಿ.
ವೈದ್ಯರು ಸೂಚಿಸಿದ ಪರೀಕ್ಷೆಗಳ ಮೇಲೆ 50% ರಿಯಾಯಿತಿ ಪಡೆಯಿರಿ
ದಿನಾಂಕ: 15 ಮಾರ್ಚ್ ಬೆಳಿಗ್ಗೆ 11 ರಿಂದ–ಮಧ್ಯಾಹ್ನ 2ರವರೆಗೆ
ಸ್ಥಳ: ಬಾಪೂಜಿ ಆಸ್ಪತ್ರೆ, ಹೊರ ರೋಗಿಗಳ ವಿಭಾಗ, ದಾವಣಗೆರೆ
ಹಾಗೂ ಎಸ್.ಎಸ್.ಹೈಟೆಕ್ ಆಸ್ಪತ್ರೆ, ಹೊರ ರೋಗಿ ವಿಭಾಗ, ರೂಂ.ನಂ. 1, ದಾವಣಗೆರೆ

